ಹಿತ್ತಲ ಗಿಡ

ಚಾತುರ್ಮಾಸಿಕ

"ರೈತ, ವಿಜ್ಞಾನಿ, ವಿದ್ಯಾರ್ಥಿ, ಅಧ್ಯಾಪಕ,
ಸ್ವಯಂ ಸೇವಾ ಸಂಸ್ಥೆ ಮತ್ತು
ಜನಪರ ಸಂಘಟನೆಗಳ ಸಾಮೂಹಿಕ ಪ್ರಯತ್ನ"

ಪೈರು 12 , ಕೊಯಿಲು 2-3, ಮೇ-ಡಿಸೆಂಬರ್ 2006

ಹೊಸ ವರ್ಷದ ಶುಭಾಶಯಗಳು



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), & NIF (National Innovation Foundation, India), Ahmedabad

ಸಂಪಾದಕೀಯ

ಗಟ್ಟಿಗೊಳ್ಳುತ್ತಿರುವ ದೇಶೀಯ ಸಾಂಪ್ರದಾಯಿಕ ಆಹಾರ ವ್ಯವಸ್ಥೆ

ಹಿತ್ತಲಗಿಡ **'ನಳಪಾಕ'** ಕಾಲಂನಡಿಯಲ್ಲಿ ಪುನರ್‌ಪುಳಿ, ಹುರಿಹಿಟ್ಟು, ಕರದಂಟು, ತುಳಸಿ ಮತ್ತು ಕರಿಬೇವಿನ ಪೌಷ್ಟಿಕತೆ, ಬಸಳೆ, ಬಾಳೆ ದಿಂಡಿನ ರಸರುಚಿ, ವಿಶೇಷ ತಂಬುಳಿ, ಚಟ್ನಿ ಇತ್ಯಾದಿ, ದೇಶೀಯ ಆಹಾರಗಳ ಪರಿಚಯ ಮಾಡುತ್ತಲೇ ಬಂದಿದೆ. ಅದಕ್ಕೆ ಪೂರಕವಾಗಿರುವ ಇಬ್ಬೀಡು, ಚೋಳೂರಿನ ವಿಶಿಷ್ಟ ಹಲಸು, ನುಗ್ಗೆ, ಉಪ್ಪಿನಕಾಯಿ ಮಾವಿನ ತಳಿಗಳು, ಮಲೆನಾಡ ಅಣಬೆ, ನಾಟಿತರಕಾರಿ ಮರದರಿಶಿಣ, ಮತ್ತಾವರದ ಮಂಡಕ್ಕಿ ಭತ್ತ, ದೇವನ ಹಳ್ಳಿಯ ಚಕ್ಕೋತ, ದೇವರಾಯರ ಭತ್ತದ ತಳಿಗಳು, ಗ್ರೀನ್ ಫೌಂಡೇಶನ್ ಸಂಸ್ಥೆ ಸಂರಕ್ಷಿಸಿದ ನೂರಾರು ಧಾನ್ಯ ಮತ್ತು ತೃಣಧಾನ್ಯ ತಳಿಗಳು ಇವೇ ಮೊದಲಾದ ಜೀವ (ತಳಿ) ವೈವಿಧ್ಯದ ಪ್ರಕಾರಗಳ ಪರಿಚಯವನ್ನು ಮಾಡುತಾ ಬಂದಿರುವೆವು. ಆಗಾಗ್ಗೆ ಅಳಿವಿನಂಚಿನಲ್ಲಿರುವ ಮಲೆನಾಡ ಕರಿಬಾಳೆ, ಕಮಲಾಪುರದ ಕೆಂಬಾಳೆ, ನವಿಲೂರ ಪೇರಳೆ ಮುಂತಾದವುಗಳ ಬಗ್ಗೆ ಕೂಡ ಎಚ್ಚರಿಸಿರುವೆವು. ಹೀಗೆ ನಮ್ಮ ಪ್ರಯತ್ನ ದೇಶೀಯ ಆಹಾರಗಳ ದಾಖಲಾತಿಯ ಬಗ್ಗೆ ಮಾತ್ರ ಸೀಮಿತಗೊಂಡಿತ್ತು.

ಆದರೆ, ಡೆಕ್ಕನ್ ಡೆವಲಂಪ್‌ಮೆಂಟ್ ಸಂಸ್ಥೆಯ **''ತೃಣಧಾನ್ಯಗಳ ಭಕ್ಷ ಭೋಜನ ''** (ಪೈರು ೧೦, ಕೊಯಿಲು ೨-೩, ೨೦೦೪) ಹವ್ಯಕ ಸಮುದಾಯದ ಪಾಕೋತ್ಸವ (ಪೈ. ೧೦, ಕೊ. ೧, ೨೦೦೪) ಬಸವನ ಗುಡಿಯ **'ಕಡಲೆಕಾಯಿ ಪರಿಷೆ'** (ಪೈ. ೭, ಕೊ. ೩, ೨೦೦೧) ಮತ್ತು ಬೆಂಗಳೂರಿನ **''ಅವರೆ ಹಿತಕುಬೇಳೆ ಮೇಳ''** (ಪೈ. ೧೧, ಕೊ. ೩, ೨೦೦೫) ಮುಂತಾದವುಗಳಿಂದ ಈ ನಮ್ಮ ದೇಶೀಯ ಆಹಾರ ವ್ಯವಸ್ಥೆ ಗಟ್ಟಿಯಾಗುವ ಲಕ್ಷಣ ಕಂಡು ಬರುತ್ತಿದೆ. ಈ ಸಂಚಿಕೆಯಲ್ಲಿ ಎ.ಪಿ. ಚಂದ್ರಶೇಖರರ 'ಇಂದ್ರಪ್ರಸ್ಥ' ದಲ್ಲಿನ **ಸಾವಯವ ಷಡ್ರಸ ಭೋಜನ** (ಪುಟ ೧), ಅಹಮದಾಬಾದಿನ **'ಸತ್ವಿಕ್'** ಸಂಪ್ರದಾಯಕ ಆಹಾರ ಮೇಳ ಮತ್ತು ಬೆಂಗಳೂರಿನ ಸಾವಯವ ಉತ್ಪನ್ನಗಳ ರಾಷ್ಟ್ರೀಯ ಮೇಳ **'ಇಂಡಿಯಾ ಆರ್ಗ್ಯಾನಿಕ್'** (ಪುಟ ೧೨)ಗಳ ಬಗ್ಗೆ ಲೇಖನಗಳಿವೆ. ಜೊತೆಗೆ, ಈ ವರ್ಷದ ಅಂತ್ಯದಲ್ಲಿ ಸಿಹಿರುಚಿ, ಪಾಯಸ, ತಿಂಡಿತಿನಿಸು, ಮೇಲೋಗರಗಳ ಮತ್ತೊಂದು **'ಹವ್ಯಕ ಪಾಕೋತ್ಸವ'** ಮತ್ತು ಹೊಸ ವರ್ಷಾಚರಣೆಗೆ 'ಅಕ್ಷಯ ಪಾತ್ರೆ' ಕಾರ್ಯಕ್ರಮದ ಸಹಯೋಗದೊಂದಿಗೆ ಬೆಂಗಳೂರಿನ ಇಸ್ಕಾನ್‌ನಲ್ಲಿ **'ಟೇಸ್ಟ್ ಆಫ್ ಇಂಡಿಯಾ'** –ಏಷಿಯಾ ಉಪಖಂಡದ ಶುದ್ಧ ಶಾಖಾಹಾರ ಸಾಂಪ್ರದಾಯಕ ಭಕ್ಷ್ಯ ಮೇಳಗಳನ್ನೂ ಆಯೋಜಿಸಲಾಗಿರುತ್ತದೆ. ಇವೆಲ್ಲಾ ನಮ್ಮದೇಶೀಯ ಆಹಾರಗಳು ಗಟ್ಟಿಯಾಗುವುದು ಮಾತ್ರವಲ್ಲ ವ್ಯವಸ್ಥಿತ ಗೊಂಡು, ವಿಸ್ತಾರಗೊಳ್ಳುತ್ತಿರುವ ಸ್ಪಷ್ಟ ಲಕ್ಷಣಗಳಾಗಿವೆ.

ಮನುಷ್ಯ ತಿನ್ನಲಿಕ್ಕಾಗಿಯೇ ಬದುಕದಿರಬಹುದು ಆದರೆ ಬದುಕಲಿಕ್ಕಾಗಿ ತಿನ್ನಲೇಬೇಕು. ಆದರೆ ಭಾರತದಂತಹ ಪ್ರಾಚೀನ ದೇಶದಲ್ಲಿ ತಿನ್ನುವುದು ಬರಿದೇ ರುಚಿ ಅಥವಾ ಆರೋಗ್ಯಕ್ಕಲ್ಲ. ಇಲ್ಲಿ ಅಡುಗೆಯಿಂದ ತಿಂದು ತೇಗುವವರೆಗೆ, ಎಲ್ಲವುಗಳ ಹಿಂದೆ ಆಚಾರ, ವಿಚಾರ, ರೀತಿ, ರಿವಾಜುಗಳ ಗಟ್ಟಿ ಸಂಸ್ಕೃತಿಯೇ ಕೆಲಸ ಮಾಡುತ್ತಿರುತ್ತದೆ. ಹಾಗಾಗಿ ಏನು ತಿನ್ನುತ್ತೇವೆ ಎನ್ನುವುದರಷ್ಟೇ 'ಹೇಗೆ' ತಿನ್ನುತ್ತೇವೆ ಅನ್ನುವುದೂ ಮುಖ್ಯವಾಗಿರುತ್ತದೆ. ಇಲ್ಲಿನ ಸಮೃದ್ಧ ಜೀವ ವೈವಿಧ್ಯವಂತೂ ಈ ದೇಶೀಯ ಆಹಾರ ವ್ಯವಸ್ಥೆಗೆ ಅಷ್ಟೇ ಗಟ್ಟಿ ಅಡಿಪಾಯ ಒದಗಿಸಿರುತ್ತದೆ ಎಂದರೆ ತಪ್ಪಾಗಲಾರದು.

ಸೂಕ್ತ ರೀತಿಯಲ್ಲಿ ವ್ಯವಹರಿಸಿದ್ದೇ ಆದಲ್ಲಿ, ಹೀಗೆ ಗಟ್ಟಿಗೊಳ್ಳುತ್ತಿರುವ ಈ ನಮ್ಮ ದೇಶೀಯ ಸಾಂಪ್ರದಾಯಿಕ ಆಹಾರ ವ್ಯವಸ್ಥೆ ಇಂದು ತ್ವರಿತ ಗತಿಯಲ್ಲಿ ಮೇಲೇಳುತ್ತಿರುವ ಭಾರತದ ಅರ್ಥವ್ಯವಸ್ಥೆಯಲ್ಲಿ, ಅಷ್ಟೇಕೆ ಇಡೀ ಜಾಗತೀಕರಣ ಪ್ರಕ್ರಿಯೆಯಲ್ಲೇ ಮಹತ್ವದ ಸ್ಥಾನ ಪಡೆಯಬಹುದಾಗಿದೆ.

ಡಾ| ಪ್ರಕಾಶ್ ಕಮ್ಮರಡಿ

ಇಂದ್ರಪ್ರಸ್ಥ :-ಹೀಗೊಂದು ಸಾವಯವ ತೋಟ, ತೋಟದಲ್ಲಿನ ಹಬ್ಬ

ಲೇಖಿನ ಡಾ। ತೇಜಸ್ವಿನಿ ಶರ್ಮ

ಎ.ಪಿ.ಚಂದ್ರಶೇಖರ್‌ರವರ ತೋಟದಲ್ಲಿ ಹಬ್ಬದ ವಾತಾವರಣ. ದೂರ ದೂರುಗಳಿಂದಲೂ ರೈತರ ಹಾಜರಾತಿ. ಈ ಎಲ್ಲಾ ರೈತರಲ್ಲೂ ತಮಗೆ ಬೇಕಾದುದನ್ನು ತಾವೇ ಹುಡುಕುವ ಹಂಬಲ.

ತೋಟಕ್ಕೆ ಆಗಮಿಸಿದೊಡನೆ ಕಣ್ಣಿಗೆ ಬಿದ್ದಿದ್ದು ಸಸ್ಯ ಸಂಪತ್ತು. ನೂರಾರು ಜಾತಿಯ ಮರಗಳು ಮಾತ್ರವಲ್ಲ, ಮರಗಳ ಮೇಲೆಲ್ಲಾ ಫಲಕಗಳು. ಮರದಿಂದ ಮರಕ್ಕೆ ಹಳೆಯ ಸೈಕಲ್ ಟಯರುಗಳಿಂದ ಕಟ್ಟಿದ ಸರಪಳಿ,ಯಾಕಿರಬಹುದು ಈ ಸರಪಳಿ? ಬಹುಶಃ ಮರದಿಂದ ಮರಕ್ಕೆ ಕಟ್ಟಿದ ಸರಪಳಿ ಮರಗಾಳಿಗೆ ಧರೆಗುರುಳದಂತೆ ಸರಪಳಿ ಕಾಯುತ್ತಿರಬಹುದೇನೋ ಎಂದು ಯೋಚಿಸುತ್ತಾ ಹತ್ತಿರ ಹೋದರೆ ಕಂಡದ್ದು ಸರಪಳಿಯನ್ನು ಹತ್ತಿ ಇಣುಕುತ್ತಿದ್ದ ವೆನಿಲ್ಲಾ ಸಸ್ಯಗಳು.

ಇಂದ್ರಪ್ರಸ್ಥದ ಪ್ರಶ್ನಾರಂಗದಲ್ಲಿ ಅಂದಿನ ಕಾರ್ಯಕ್ರಮ

ಸುತ್ತಮುತ್ತಲಿನ, ದೂರದ ಮಂಗಳೂರು, ಶಿರಸಿಯ ರೈತರೂ ಇದ್ದರು. ಪ್ರತಿಯೊಬ್ಬರಲ್ಲೂ ಎದ್ದು ಕಾಣಿಸುತ್ತಿದ್ದುದು ತಮಗೆ ಬೇಕಾದುದನ್ನು ತಾವೇ ಹುಡುಕುತ್ತೇವೆ, ತಾವೇ ಸಾಧಿಸುತ್ತೇವೆ ಎಂಬ ಉತ್ಸಾಹ, ವೈಜ್ಞಾನಿಕ ಮನೋ ವೃತ್ತಿ, ಪ್ರಶ್ನಾರಂಗ ಎಲ್ಲೆಂದು ಹುಡುಕುತ್ತಾ ನಡೆದರೆ, ದಾರಿಯುದ್ದಕ್ಕೂ ಮರಗಳ ಮೇಲೆಲ್ಲಾ ಫಲಕಗಳು, ನೂರಾರು ಸೂಕ್ತಿಗಳು. ಪ್ರಶ್ನಾರಂಗದ ಹೊರ ಭಾಗದಲ್ಲಿ ಸಾವಯವ ಮಳಿಗೆ. ಹೆಚ್ಚಾಗಿ ಮಹಿಳೆಯರೇ ತುಂಬಿದ್ದ ಸಾವಯವ ವಸ್ತುಗಳ ಮಾರಾಟದ ಮಳಿಗೆಯನ್ನು ಹೊಕ್ಕರೆ ಅಚ್ಚರಿ ಕಾದಿತ್ತು. ಎಲ್ಲವೂ ಸಾವಯವ ವಸ್ತುಗಳು ಕುತೂಹಲದಿಂದ ಒಂದೊಂದಾಗಿ ಚೀಲಕ್ಕೆ ತುಂಬುತ್ತಾ ಸಾಗಿದೆ. ಒಂದು ತೋಟದಲ್ಲಿ ಬೆಳೆಯುವ ಸಮಗ್ರ ವಸ್ತುಗಳಿಗೂ ಮಾರುಕಟ್ಟೆ ದೊರಕಿಸುವ ಪ್ರಯತ್ನ ಎನ್ನಿಸಿತು. ಸೊಪ್ಪು ತರಕಾರಿಗಳು, ಗೆಡ್ಡೆ ತರಕಾರಿಗಳು, ಲಿಂಬೆ, ಹೇರಳೆ, ಕಿತ್ತಳೆ, ಮೂಸಂಬಿ ಮುಂತಾದವು. ಸಾವಯವ ಎನ್ನುವುದು ಅವುಗಳ ವೈಶಿಷ್ಠ. ಜೊತೆಯಲ್ಲಿ ಬಂದಿದ್ದ ಮಗಳು ಶರಬತ್ತು, ಜ್ಯಾಂ ಎಂದು ಕೈಯೆಳೆದಳು. ಆಯ್ಕೆಯೇ ದೊಡ್ಡ ಸಮಸ್ಯೆಯಾಯಿತು. ನಮಗೆ ಗೊತ್ತಿರುವುದೇನಿದ್ದರೂ ಲಿಂಬೆ, ಮುಸುಂಬಿ, ಕಿತ್ತಳೆ ಶರಬತ್ತು. ಆದರೆ ಅಲ್ಲಿ ಕಂಡಿದ್ದು ನೇರಳೆ, ಶುಂಠಿ, ಪುನರ್ಪುಳಿ, ಸಂಪಿಗೆ, ತುಳಸಿ ಶರಬತ್ತು. ಇನ್ನು ಜ್ಯಾಂಗಳ ಕಡೆಗೆ ತಿರುಗಿದರೆ ಕಣ್ಣಿಗೆ ಬಿದ್ದಿದ್ದು ಜ್ಯಾ ಹಣ್ಣಿನ ಜ್ಯಾಂ, ಸಪೋಟ ಜ್ಯಾಂ, ಅಷ್ಟರಲ್ಲಿ ಮಗಳು ಮತ್ತೆ ಕೈಯೆಳೆದಳು ನೋಡಮ್ಮಾ ಶುಂಠಿ ಮಿಠಾಯಿ. ಚ್ಯೂಯಿಂಗ್ ಹಣ್ಣೋ ಇದು ನೋಡಿ ಜೀರ್ಣಕ್ಕೆ ಎಂದು ಅಲ್ಲಿದ್ದವರು ತೋರಿಸಿದ್ದು. ಹೇರಳೆ ಸಿಪ್ಪೆ, ಲಿಂಬೆ ಸಿಪ್ಪೆ, ಕಿತ್ತಾಳೆ ಸಿಪ್ಪೆ. ಪ್ರತಿಯೊಂದು ಸಿಹಿ ಹಾಗೂ ಕಾರದ ರುಚಿಯಲ್ಲಿ ನಾಲಿಗೆಯೇನೋ ಒಪ್ಪಿತು. ಸಿಪ್ಪೆ ಎಂದೊಡನೇ ಬಿಸಾಡು ಎನ್ನುವ ಮನಸ್ಸಿಗೆ ಒಪ್ಪಿಸುವುದಷ್ಟೇ ಕಷ್ಟದ ಕೆಲಸ . ಒಣಗಿಸಿದ ಹಣ್ಣುಗಳ ಸಾಲೇ ಇನ್ನೊಂದಡೆ. ಒಣಗಿಸಿದ ಮಾವು, ಬಾಳೆ, ಸಪೋಟ. ರುಚಿಯೂ ಹೌದು; ಒಳ್ಳೆಯದೂ ಹೌದು, ಆದರೆ ಬಣ್ಣಬಣ್ಣದ ಪ್ಯಾಕ್ ಜೊತೆಗೆ ಚಿತ್ತಾಕರ್ಷಕ ಕೊಡುಗೆಗಳು, ಮಾರುಕಟ್ಟೆಯ ಪ್ರಾಚಾರಗಳು ಇವುಗಳ ಮಧ್ಯೆ ಮುಳುಗಿರುವ ಮಕ್ಕಳು, ಯುವಕರನ್ನು ಈ ಆರೋಗ್ಯಕರ ಆಹಾರ ವಸ್ತುಗಳೆಡೆಗೆ ಎಳೆಯುವುದು ಹೇಗೆ?

ದಿನ ನಿತ್ಯದ ಬಳಕೆಗೆ ಬೇಕಾದ, ಸಮಯದ ಒತ್ತಡಕ್ಕೆ ನೆರವಾಗುವ ಅಡಿಗೆ ಪದಾರ್ಥಗಳಿವೆಯೇ ಎಂದು ಹುಡುಕಿದರೆ ಕಂಡದ್ದು ಗಡಿಬಿಡಿ ಸಾರಿನ ಪುಡಿ, ಮಜ್ಜಿಗೆ ಮಸಾಲೆ,ನೆಲ್ಲಿ ಪುಡಿ, ಶುಂಠಿಪುಡಿ, ಇಷ್ಟಲ್ಲದೆ ಹಪ್ಪಳ, ಸಂಡಿಗೆ, ಬಾಳಕಗಳು, ಅದೂ ಎಂತವು! ಜಾಯ್ ಸೆಂಡಿಗೆ, ಕುದನೆ ಸೆಂಡಿಗೆ, ಬೆರೆಕೆ ಸೊಪ್ಪಿನ ಸಂಡಿಗೆ!

ಜೊತೆಯಲ್ಲಿ ಕಂಡಿದ್ದು ಪುಳಿಂಕೊಟೆ (ಹುರಿದ ಹುಣಸೆ ಬೀಜ) ಮಳೆಗಾಲದಲ್ಲಿ ಶಾಲೆಯಲ್ಲಿ ಗೆಳತಿಯರೊಂದಿಗೆ ಹಂಚಿ ತಿಂದ ಸವಿ ನೆನಪು ಮುತ್ತಿಬಂದಿತು. ಹಳ್ಳಿ ಶಾಲೆಗೆ ಹೋದವರಿಗಷ್ಟೇ ಗೊತ್ತು ಅದರ ರುಚಿ.

ಸಾವಯವ ಉತ್ಪನ್ನಗಳ ವೈವಿಧ್ಯ ನೋಡಿ ಮುಗಿಯುವುದೇ ಇಲ್ಲ ಎನಿಸಿದಾಗ ಕೇಳಿದೆ, ಏನೆಲ್ಲಾ ಇದೆ ನಿಮ್ಮಲ್ಲಿ? ಅಲ್ಲೇ ಇದ್ದ ಪುಸ್ತಕ ಕೈಗಿತ್ತರು. **'ಸಾವಯವ ಅಡುಗೆ -ಇಂದ್ರಪ್ರಸ್ಥದ ಕೊಡುಗೆ '**. ಮೌಲ್ಯವರ್ಧಿತ ಸಾವಯವ ವಸ್ತುಗಳ ಪಟ್ಟಿ, ಜೊತೆಗೆ ಬೆಲೆ ಕೂಡ ಇತ್ತು. ಪುಸ್ತಕಕ್ಕೂ ಬೆಲೆಯಿತ್ತು- 15 ರೂ. ಎ.ಪಿ. ಚಂದ್ರಶೇಖರರವರು ಕೃಷಿಕನ ಪ್ರತಿ ಬೆವರ ಹನಿಗೂ ಬೆಲೆ ಕೇಳುವವರು -ಬೆಲೆ ಕಟ್ಟುವವರು ಎಂದುಕೊಂಡೆ. ಪುಸ್ತಕದ ಪುಟ ತಿರುಗಿಸಿದರೆ ಮೊದಲೇ ಕಣ್ಣಿಗೆ ಬಿದ್ದಿದ್ದು ಪ್ರಕೃತಿ ಪರವಾದ ನೀವು ನಮ್ಮ ವಸ್ತುಗಳನ್ನು ಹಾಗೂ ವಿಚಾರಗಳನ್ನು ಬೆಲೆ ಕೊಟ್ಟು ಕೊಂಡು ಕೊಳ್ಳಬೇಕೆಂಬ ಪ್ರೀತಿ ಪೂರ್ವಕ ವಿನಂತಿ. ಸಾಧ್ಯವಾದಷ್ಟು ವಿವರವಾಗಿ, ಸಾಕಷ್ಟು ಮಾಹಿತಿಗಳೊಂದಿಗೆ ತುಂಬಿತ್ತು ಬೆಲೆ ಪಟ್ಟಿಯ ಪುಸ್ತಕ. ಇಂದ್ರಪ್ರಸ್ಥ ತೋಟವೋ, ಸಂಸ್ಥೆಯೋ ಎನ್ನುವಷ್ಟರ ಮಟ್ಟಿಗಿನ ಉತ್ಪನ್ನಗಳು. ಈ ಮೊದಲೇ ನನ್ನ ಚೀಲ ಸೇರಿದ ಉತ್ಪನ್ನಗಳಲ್ಲದೇ ವಿವಿಧ ಕಷಾಯಗಳು, ಆಯುರ್ವೇದಿಕ ಔಷಧಿಗಳು, ಔಷಧೀಯ ಎಣ್ಣೆಗಳು, ಮಾರ್ಜಕಗಳು, ಸುಮಾರು 40 ಪುಟಗಳ ಉತ್ಪನ್ನಗಳ ಪಟ್ಟಿ.

ಕಣ್ಣು ಹೊರಗಿದ್ದ ಉತ್ಪನ್ನ ಗಳ ಖರೀದಿಯಲ್ಲಿ ಮಗ್ನವಾಗಿದ್ದರೆ, ಕಿವಿ ಪ್ರಶ್ನಾರಂಗದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮವನ್ನು ಆಸ್ವಾದಿಸುತ್ತಿತ್ತು. ವಿಜಯಕರ್ನಾಟಕದ ವಿಶ್ವೇಶ್ವರ ಭಟ್ಟರ ಹಾಗೂ ಸಾವಯವ ಕೃಷಿಕ ನಾರಾಯಣ ರೆಡ್ಡಿಯವರ ಭಾಷಣಗಳು. ಮುಖ್ಯವಾಗಿ ನಡೆದದ್ದು ಎ.ಪಿ. ಚಂದ್ರಶೇಖರ್‌ರವರೇ ಬರೆದಿದ್ದ **'ಭೂಮಿ ನಮ್ಮ ಪಾಠಶಾಲೆ -ಪ್ರಕೃತಿ ತಾನೆ ಗುರುವು'** ಎಂಬ ಪುಸ್ತಕದ ಬಿಡುಗಡೆ. ಸಮಾರಂಭಕ್ಕೆ ಬಂದವರಿಗೆಲ್ಲಾ ಇಂದ್ರಪ್ರಸ್ಥದಲ್ಲಿ ಭೋಜನ. ರಾಗಿಮುದ್ದೆ ಜೊತೆಗೆ ತೋಟದಲ್ಲೇ ಬೆಳೆದ ನೂರಾ ಒಂದು ಸೊಪ್ಪಿನ ಬೆರಕೆ ಸಾರು, ಪತ್ರೊಡೆ, ಫ್ಯಾಷನ್ ಫ್ರೂಟ್‌ನ ಹಲ್ವ! ನಾಲಿಗೆಗೂ ಕಸರತ್ತು! ಊಟದ ನಂತರ ಮತ್ತೆ ಪ್ರಶ್ನಾರಂಗ ದಲ್ಲಿ ರೈತರ ನಡುವಣ ಚರ್ಚೆ. ಅಂದಹಾಗೆ ಪ್ರಶ್ನಾರಂಗ ವೆಂದರೆ ಇಂದ್ರಪ್ರಸ್ಥ -ತೋಟದೊಳಗಿನ ಸಭಾ ಮಂಟಪ. ಸಾವಯವ ವ್ಯವಸಾಯದ ಸಾಧನೆ ನೋಡಬೇಕಾದರೆ, ಸಾವಯವ ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸಬೇಕೆನ್ನುವ ಪ್ರಯತ್ನಗಳನ್ನು ಪ್ರತ್ಯಕ್ಷ ದರ್ಶನ ಮಾಡಬೇಕೆನಿಸಿದರೆ, ನೀವು ಹೋಗಲೇಬೇಕಾದ ಸ್ಥಳ ಇಂದ್ರಪ್ರಸ್ಥ.



ವಿಳಾಸ: ಎ.ಪಿ. ಚಂದ್ರಶೇಖರ್,ಇಂದ್ರಪ್ರಸ್ಥ, ಜೀವಧಾರಕ ಸಸ್ಯವಾಟೀ,
ಕಳಲವಾಡಿ ಗ್ರಾಮ, ಉದ್ಬೂರು ಅಂಚೆ, ಮೈಸೂರು-570008.
ದೂರವಾಣಿ-0821-2597936/2900553

ಅಧಿಕ ಫಸಲು ಪಡೆಯಲು

ಅಸ್ಸಾಂ ನಾಗಾಂವ್‌ನ ರೈತ ಅಖಿಲ್ ಮಂಡಲ್‌ರಿಗೆ ಪ್ರೌಢಶಾಲೆಯ ವರೆಗೆ ವಿದ್ಯಾಭ್ಯಾಸ. ಸ್ವಲ್ಪವೇ ಭೂಮಿ ಇರುವುದು. ಅದರಲ್ಲಿ ಕೆಲವು ಅಡಿಕೆ ಮರಗಳು. ಬಡತನವಿದ್ದರೂ ಅಖಿಲ್ ಮಂಡಲ್ ಯಾವಾಗಲೂ ಹೊಸತರ ಆಲೋಚನೆ ಮಾಡುವವರು. ಈ ನಿಟ್ಟಿನಲ್ಲೇ ಅಡಿಕೆ ಮರಗಳಲ್ಲಿ ಉತ್ಪತ್ತಿ ಹೆಚ್ಚಿಸುವ ಯೋಚನೆ ಹರಿಯಿತು. ಆಗ ನೆನಪಾದುದ್ದು ಚಿಕ್ಕಂದಿನಲ್ಲಿ ಕಲಿತ ಯೋಗ ಜೊತೆಗೆ ದೈಹಿಕ ವ್ಯಾಯಮ ಇವುಗಳನ್ನು ಮಾಡಿದರೆ ಮನುಷ್ಯ ಆರೋಗ್ಯ ವಾಗಿರುತ್ತಾನೆ, ಚುರುಕಾಗಿರುತ್ತಾನೆ, ರೋಗ ಬಾಧಿಸುವುದಿಲ್ಲ ಇದೇ ತತ್ವವನ್ನು ಸಸ್ಯಗಳಿಗೆ ಅನ್ವಯಿಸಿದರೆ ಹೇಗೆ ಎಂಬ ಯೋಚನೆ ಇವರಿಗೆ ಮೂಡಲಾರಂಭಿಸಿತು.

ಅಖಿಲ್ ಮಂಡಲ್ ಸಸ್ಯಗಳಿಗೆ ವ್ಯಾಯಮ ಮಾಡಿಸಲು ತಮ್ಮದೇ ವಿಧಾನ ಅಳವಡಿಸಿಕೊಂಡರು. ಸಸ್ಯಗಳನ್ನು ವಿವಿಧ ದಿಕ್ಕುಗಳಿಗೆ ಬಗ್ಗಿಸಲು ಆರಂಭಿಸಿದರು. ಆದರೆ ಒಂದು ಆಕಸ್ಮಿಕ ನಡೆದು ಅದರಿಂದ ಲಾಭವಾಯಿತು. ಮೂರು ಅಡಿಕೆ ಸಸಿಗಳಿಗೆ ಈ ರೀತಿ ವ್ಯಾಯಾಮ ಮಾಡಿಸುತ್ತಿದ್ದಾಗ ಒಂದರ ನಡುವಿನ ತಿರಿದಂಟು ಮುರಿದು ಹೋಯಿತು. ಕೆಳಗಿನ ಮೂರು ಸೋಗೆ ಹೊರತಾಗಿ ಉಳಿದೆಲ್ಲಾ ತುಂಡಾದವು. ಅಖಿಲ್ ಮಂಡೆಲ್‌ಗೆ ತುಂಬಾ ಬೇಸರವಾಯಿತು. ಆ ಸಸಿ ಸತ್ತುಹೋಗುತ್ತದೆ ಎಂದು ಭಾವಿಸಿದರು. ಆದರೆ ಆದುದ್ದೇ ಬೇರೆ. ತಲೆ ಮುರಿದ ಅಡಿಕೆ ಸಸಿ ಬದುಕುಳಿದುದ್ದು ಮಾತ್ರವಲ್ಲ ದೃಢವಾಗಿ ಬೆಳೆದು ಆರು ವರ್ಷಗಳ ಬಳಿಕ ಗೊನೆ ಬಿಡಲಾರಂಭಿಸಿದಾಗ ಅಖಿಲ್ ಮಂಡೆಲ್‌ಗೆ ಆಶ್ಚರ್ಯ. ಇತರ ಅಡಿಕೆ ಮರಗಳಿಗಿಂತ ಈ ಮರದಲ್ಲಿ ಹೆಚ್ಚು ಫಸಲು. ಇತರ ಮರಗಳಲ್ಲಿ ಎರಡು ಮೂರು ಗೊನೆಗಳಿದ್ದರೆ ಇದರಲ್ಲಿ ಆರಾರುಗೊನೆ.

ಈ ದಿಕ್ಕಿನಲ್ಲಿ ಅಖಿಲ್ ಪ್ರಯೋಗವನ್ನು ಮೂರು ರೀತಿಯಲ್ಲಿ ಅನುಸರಿಸಿ ಮುಂದುವರೆಸಿದರು.

1. ಮೂರು ವರ್ಷ ಪ್ರಾಯದ ಅಡಿಕೆ ಸಸಿಗಳ ಕೆಳಗಿನ ಎರಡು ಮೂರು ಸೋಗೆಗಳನ್ನು ಮಾತ್ರ ಉಳಿಸಿ ಉಳಿದೆಲ್ಲ ಸೋಗೆಗಳನ್ನು ತುಂಡರಿಸಿದರು.
2. ಸಣ್ಣ ಸಸಿಯಾಗಿರುವಾಗಲೇ ಕೆಳಗಿನ ಸಸಿಗಳ ಎರಡು ಮೂರು ಸೋಗೆಗಳನ್ನು ಮಾತ್ರ ಬಿಟ್ಟು ಉಳಿದೆಲ್ಲ ಎಳೆಯ ಸೋಗೆಗಳನ್ನು ಕತ್ತರಸಿ ತೆಗೆದರು.
3. ಮೇಲಿನೆರಡೂ ವಿಧಾನಗಳನ್ನು ಒಂದೇ ಗಿಡದಲ್ಲಿ ಅಳವಡಿಸಿದರು. ಅಂದರೆ ಸಸಿ ಚಿಕ್ಕದಾಗಿರುವಾಗಲೇ ಅದರ ಕೆಳಗಿನ ಎರಡು ಮೂರು ಸೋಗೆ ಮಾತ್ರ ಉಳಿಸಿ ಸುಳಿ ಕತ್ತರಿಸಿದರು. ಆ ಸಸಿ ಬೆಳೆದು ಮೂರು ವರ್ಷ ಪ್ರಾಯವಾದಾಗ ಮತ್ತೆ ಕೆಳಗಿನ ಎರಡು ಮೂರು ಸೋಗೆ ಮಾತ್ರ ಉಳಿಸಿ ಉಳಿದೆಲ್ಲ ಸೋಗೆಗಳನ್ನು ಕತ್ತರಿಸಿದರು.

ಪ್ರಯೋಗಕ್ಕೆ ಒಳಪಡಿಸಿದ ಅಡಿಕೆ ಸಸಿಗಳು ಬೆಳೆದು ದೊಡ್ಡದಾದಾಗ ಸಾಮಾನ್ಯವಾಗಿ ಬೆಳೆದ ಗಿಡಗಳಿಗಿಂತ ಗಿಡ್ಡವಾಗಿದ್ದವು. ಗಂಟುಗಳು ಹತ್ತಿರ ಹತ್ತಿರವಾಗಿ ಹೆಚ್ಚು ದೃಢವಾಗಿ ಬೇಗನೆ ಗೊನೆ ಬಿಟ್ಟವು. ಇವರ ಪ್ರಯೋಗದ ಮೂರು ಮರಗಳಲ್ಲಿ ಏಳೇಳು ಗೊನೆಗಳು ಮೂಡಿದವು ಎನ್ನುತ್ತಾರೆ. ಈ ರೀತಿ ತಲೆ ಕತ್ತರಿಸಿದ್ದರಿಂದಾಗಿ ಅಡಿಕೆ ಮರಗಳಿಗೆ ಯಾವುದೇ ತೊಂದರೆ ಉಂಟಾಗಿಲ್ಲ. ಆದರೆ ಉತ್ತಮ ಫಲಿತಾಂಶ ಪಡೆಯಲು ಈ ಮುಂದಿನ ಎಚ್ಚರಿಕೆ ವಹಿಸಬೇಕು ಎನ್ನುತ್ತಾರೆ.

1. ಸಸಿಯ ತಲೆ ಕತ್ತರಿಸುವಾಗ ನೇರವಾಗಿ ಕತ್ತರಿಸದೆ ಓರೆಯಾಗಿ ಕತ್ತರಿಸಬೇಕು. ಕತ್ತರಿಸಿದ ಭಾಗದ ಮೇಲೆ ಸೂರ್ಯನ ಬಿಸಿಲು ಚೆನ್ನಾಗಿ ಬೀಳಬೇಕು. ಕತ್ತರಿಸಿದ ಭಾಗ ದಕ್ಷಿಣ ದಿಕ್ಕಿಗೆ ತೆರೆದಿರುವಂತೆ ಕತ್ತರಿಸಬೇಕು.
2. ಕತ್ತರಿಸುವ ಕಾರ್ಯವನ್ನು ಸಸಿಗಳು ಬೆಳೆಯುವ ಕಾಲಾವಧಿಯಲ್ಲಿ ಅಂದರೆ ಮೇ-ಜೂನ್ ತಿಂಗಳಲ್ಲಿ ಕೈಗೊಳ್ಳಬೇಕು.

ಅಖಿಲ್ ಮಂಡಲ್ ಈ ವಿಧಾನದಲ್ಲಿ ಹೆಚ್ಚಿನ ಖರ್ಚು ಇಲ್ಲದೆ ಅಧಿಕ ಫಸಲು ಪಡೆಯಬಹುದೆನ್ನುತ್ತಾರೆ. ಅವರು ಈ ಪ್ರಯೋಗ ಆರಂಭಿಸಿದ್ದು 1980 ರಲ್ಲಿ, ಮೊದಲ ಫಸಲು1986 ರಲ್ಲಿ, ಆಮೇಲೆ ನಿರಂತರವಾಗಿ ಪ್ರಯೋಗ ನಿರತರಾಗಿದ್ದಾರೆ. ಈ ಪ್ರಯೋಗವನ್ನೀಗ ತೆಂಗಿನ ಸಸಿಗಳ ಮೇಲೂ ಕೂಡ ನಡೆಸುತ್ತಿದ್ದೇನೆ ಎನ್ನುತ್ತಾರೆ.

ತಳಮಟ್ಟದ ಸಂಶೋಧಕರನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ನಿರತವಾಗಿರುವ ಅಹ್ಮದಾಬಾದಿನ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ (NIF) ಈ ಬಗ್ಗೆ ಸಂಶೋಧನೆ ಮುಂದುವರಿಸುತ್ತಿದೆ.

ಮೂಲ: ಸುದರ್ಶನ್, ಪ್ರಜಾವಾಣಿ, 16 ಆಗಸ್ಟ್ 2006

ಸಿಂಗಾರಕ್ಕೆ ಸಿಸೇರಿಯನ್ ಆಪರೇಷನ್!

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು ಸಕ್ಕರಾಯಪಟ್ಟಣದ. ಸಚ್ಚಿದಾನಂದರು ಕೃಷಿ ವಿಜ್ಞಾನದ ಸ್ನಾತಕೋತ್ತರ ಪದವೀಧರರು. ಇವರು ತಮ್ಮ ಅಡಿಕೆ ತೋಟದಲ್ಲಿ ಗಿಡಗಳಲ್ಲಿ ಒಂದೇ ಸಮಯದಲ್ಲಿ ಹಲವು ಗೊನೆ ಬರುವಂತೆ ಸರಳ ತಂತ್ರವೊಂದನ್ನು ಕಂಡುಕೊಂಡಿದ್ದಾರೆ. ಅಡಿಕೆ ಗಿಡಕ್ಕೆ ಅಂಟಿಕೊಂಡ ಹಸಿ ಅಡಿಕೆ ಹಾಳೆಯನ್ನು ಸಣ್ಣ ಕತ್ತಿಯಿಂದ ಮೇಲಿನಿಂದ ಕೆಳಕ್ಕೆ ಸೀಳಿ, ಮೊದಲು ಅಡಿಕೆ ಸಿಂಗಾರ ಅರಳಲು ಗಿಡಕ್ಕೆ ಸಹಾಯ ಮಾಡುತ್ತಾರೆ. ಅಡಿಕೆ ಗಿಡಗಳಿಗೆ ಭದ್ರವಾಗಿ ಅಂಟಿಕೊಂಡಿದ್ದ ತಿಳಿಹಳದಿ ಬಣ್ಣದ ಹಾಳೆಗಳನ್ನು ತೆಗೆದು ಹಾಕುತ್ತಾರೆ. ಏಕೆಂದರೆ ಅವುಗಳ ಬುಡದಲ್ಲಿ ಎರಡಿಂಚಿನ ಅಡಿಕೆ ಸಿಂಗಾರ ಹುಟ್ಟಿ ಅರಳದೆ ಒಣಗಿ ಸತ್ತು ಹೋಗುತ್ತಿತ್ತು. ಇಂತಹ ಹಾಳೆಗಳನ್ನು ಹಸಿಯಾಗಿದ್ದಾಗಲೇ ಸೀಳಿದರೆ, ಆ ಸಿಂಗಾರ ಅರಳಿ, ಮತ್ತೊಂದು ಅಡಿಕೆ ಗೊನೆ ಬೆಳೆಯುತ್ತದೆ. ಇದಕ್ಕೆ ಸಚ್ಚಿದಾನಂದ ಅಡಿಕೆ ಗಿಡದ ಸಿಸೇರಿಯನ್ ಆಪರೇಷನ್ ಎಂದು ಹೆಸರಿಟ್ಟಿದ್ದಾರೆ.

ಮೂಲ : ಆಡ್ದೂರು ಕೃಷ್ಣರಾವ್, ಉದಯವಾಣಿ,25 ಸೆಪ್ಟಂಬರ್ 2006

ಅಡಿಕೆ ಮರಕ್ಕೆ ಮಣ್ಣಿನ ಲೇಪನ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕು ಹೊನಗದ್ದೆ ಗ್ರಾಮ ಬಾರೆಮನೆಯ ಗಣಪತಿ ಗಾಂವಕರ್‌ರವರು ಅಡಿಕೆ ಮರಗಳಿಗೆ ಅತಿಯಾದ ಬಿಸಿಲಿನಿಂದ ಉಂಟಾಗುವ ತೊಂದರೆಗಳನ್ನು ತಪ್ಪಿಸಲು ಒಂದು ಸರಳ ವಿಧಾನವನ್ನು ಕಂಡುಕೊಂಡಿದ್ದಾರೆ.

ಬೇಸಿಗೆಯ ಬಿಸಿಲಿನ ತಾಪಕ್ಕೆ ಅಡಿಕೆ ಮರ ಕಾಂಡ ಸುಟ್ಟು ಬೆಳವಣಿಗೆ ಕುಂಠಿತವಾಗುತ್ತದೆ. ಕೆಲವೊಮ್ಮೆ ತೀವ್ರವಾದ ಬಿಸಿಲಿಗೆ ಮರಗಳ ಭವಿಷ್ಯವೇ ನಾಶವಾಗುವ ಅಪಾಯವಿರುತ್ತದೆ. ಈ ಅಪಾಯದಿಂದ ಪಾರಾಗಲು ಗಾಂವಕರ್ ರವರು ಹಸಿ ಮಣ್ಣನ್ನು ಕಲಸಿ, ಅಡಿಕೆ ಮರಗಳ ಕಾಂಡದ ಬುಡದಿಂದ ಹೆಡೆ (ಎಲೆ)ಯ ವರೆಗೆ ಲೇಪಿಸಿ ಮರಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ.

ಕಲ್ಲುಗಳಿಲ್ಲದ ಗದ್ದೆಯ ಅಥವಾ ತೋಟದ ಮೃದುವಾದ ಮಣ್ಣನ್ನು ನೀರಿನಲ್ಲಿ ಬೆರೆಸಿ ಮತ್ತಷ್ಟು ಮೃದುಗೊಳಿಸಿ ಮರದ ಸುತ್ತಾಸುಮಾರು ಅರ್ಧ ಅಂಗುಲ ದಪ್ಪ ಲೇಪಿಸುವುದರಿಂದ ಮರಕ್ಕೆ ನೇರವಾಗಿ ಬೀಳುವ ಬಿಸಿಲಿನ ತಾಪ ಕಡಿಮೆಯಾಗುತ್ತದೆ. ಆದ್ದರಿಂದ ಒಳಭಾಗದ ತೇವಾಂಶ ಕಾಯ್ದುಕೊಂಡು ಸಸ್ಯ ಸದೃಢವಾಗಿ ಬೆಳೆಯಬಲ್ಲದೆಂದು ಗಾಂವಕರ್ ಹೇಳುತ್ತಾರೆ.

ಮೂಲ: ಪ್ರಜಾವಾಣಿ 17 ಮೇ 2006

ಅಡಿಕೆ ಚೊಗರಿನ ಬಣ್ಣದ ಬಟ್ಟೆ

ಮಲೆನಾಡಿನ ಸಾಗರ ತಾಲ್ಲೂಕು ಭೀಮನಕೋಣೆಯಲ್ಲಿ ಒಂದು ಗ್ರಾಮೀಣ ಚಳುವಳಿಯೇ 1995 ರಲ್ಲಿ ಆರಂಭಗೊಂಡಿತ್ತು. ಇಲ್ಲಿ **'ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ'**ದ ಅಡಿಯಲ್ಲಿ ಮಹಿಳೆಯರ ಖಾದಿ ಕೈ ಮಗ್ಗ ಘಟಕ ಒಂದು ಪ್ರಾರಂಭವಾಯಿತು. ಈ ದೇಶದ ಓರ್ವ ಉತ್ತಮ ನಾಟಕಕಾರ ಸಮುದಾಯ ಪ್ರಸನ್ನರ ಅವಿರತ ಪ್ರಯತ್ನದ ಫಲವೇ ಈ ಚರಕ ಸಂಸ್ಥೆ. ಎನ್. ಎಮ್. ಕುಲಕರ್ಣಿ ಪತ್ರಿಕೋದ್ಯಮದಲ್ಲಿ ಡಿಪ್ಲೋಮ ಪಡೆದ ಪಧವೀಧರರು. ಇವರು ಈ ಸಂಸ್ಥೆಗೆ ಬಂದು ಸೇರಿಕೊಂಡರು. ಈ ಸಂಸ್ಥೆ ನೂಲಿಗೆ ಸುಸ್ಥಿರ ರೀತಿಯಲ್ಲಿ ಮಾಲಿನ್ಯಕ್ಕೆ ಅವಕಾಶ ಕೊಡದ ಬಣ್ಣ ಹಾಕುವ ತಂತ್ರಜ್ಞಾನದ ಅಗತ್ಯವಿತ್ತು. ಈ ವಿಷಯವಾಗಿ ಇವರು ಬೆಂಗಳೂರಿನ ವೀನಸ್ ಸರ್ವೀಸ್ ಸೆಂಟರ್ ನಲ್ಲಿ ತರಬೇತಿ ಪಡೆದಿದ್ದರು. ಸಾಮಾನ್ಯವಾಗಿ ಬಟ್ಟೆ ತಯಾರಿಕೆಯಲ್ಲಿ ರಾಸಾಯನಿಕ ಬಣ್ಣ ಬಳಸುತ್ತಿದ್ದು ಇದರಿಂದ ಬರುವ ಅಧಿಕ ಪ್ರಮಾಣದ ತ್ಯಾಜದಿಂದ ನೀರು ಮಾಲಿನ್ಯಗೊಂಡು ಇಡೀ ಪ್ರದೇಶವೇ ದುರ್ವಾಸನೆ ಯಿಂದ ಕೂಡಿರುತ್ತಿತ್ತು, ಇದೂ ಅಲ್ಲದೆ ಕೆಲವು ರಾಸಾಯನಿಕ ಬಣ್ಣಗಳು ಕ್ಯಾನ್ಸರ್‌ಗೂ ಕಾರಣವಾಗಿದ್ದು ವಿದೇಶಗಳಲ್ಲಿ ನಿಷೇಧವಿರುವ ಸುದ್ದಿಯೂ ಇತ್ತು. ಇದೆಲ್ಲದರಿಂದ ಕುಲಕರ್ಣಿ ಬಣ್ಣಗಾರಿಕೆಯ ಪರ್ಯಾಯ ಸಾಧ್ಯತೆಗಳ ಬಗೆಗೆ ಯೋಚಿಸಿದರು.

ಮಲೆನಾಡ ಪ್ರಾಂತ್ಯದಲ್ಲಿ ಬಟ್ಟೆಗೆ ತಗುಲಿದ ಅಡಿಕೆ, ಬಾಳೆ, ಗೇರು ಹಣ್ಣಿನ ಕಲೆಗಳು ತೊಳೆದರೂ ಹೋಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹೀಗೆ ಬಟ್ಟೆಗೆ ಕಲೆ ಹಿಡಿಯುವ ನೈಸರ್ಗಿಕ ವಸ್ತುಗಳನ್ನೇ ವೈಜ್ಞಾನಿಕ ವಾಗಿ ಸಂಸ್ಕರಿಸಿ ಬಣ್ಣಗಾರಿಕೆಗೆ ಪ್ರಯೋಗಿಸಬಾರದೇಕೆ ಎಂಬ ಪ್ರಶ್ನೆ ಸಹಜ ವಾಗಿ ಕುಲಕರ್ಣಿಯವರಿಗೆ ಹುಟ್ಟಿತು. ಇಂತಹ ವಸ್ತುಗಳನ್ನೆಲ್ಲ ಪಟ್ಟಿ ಮಾಡಿ ದಾಗ ಅವರಿಗೆ ಭರವಸೆಯಾದದ್ದು ಅಡಿಕೆ ಚೊಗರು. ಈ ಚೊಗರಿನ ಬಣ್ಣಗಾರಿಕೆ ಒಂದು ವ್ಯವಸ್ಥಿತಕ್ಕೆ ಬರಲು ಎರಡು ವರ್ಷಗಳೇ ಬೇಕಾಯಿತು. ಸ್ಥಳೀಯ ಉತ್ಪನ್ನಗಳನ್ನು ಬಳಸಿ ಬಣ್ಣಗಾರಿಕೆ ಮಾಡುವ ಮೂಲಕ ಸ್ವಾವ ಲಂಬನೆ ಸಾಧ್ಯವಾಗುತ್ತದೆ ಮಾತ್ರವಲ್ಲ ರಾಸಾಯನಿಕ ಬಣ್ಣಗಾರಿಕೆಗೆ ಹೋಲಿಸಿದರೆ ವೆಚ್ಚದಲ್ಲಿ ಅರ್ಧಕ್ಕಿಂತ ಕಡಿಮೆಯಾಗುತ್ತದೆ. ಈ ಘಟಕ ದಲ್ಲಿ ಚೊಗರಿನ ತ್ಯಾಜ್ಯವನ್ನು ಭೂಮಿಗೆ ಹರಿಬಿಡುವುದರಿಂದ ಪರಿಸರಕ್ಕೆ ಯಾವುದೇ ಹಾನಿಯಿಲ್ಲ. ಅಡಿಕೆ ಚೊಗರಿನಿಂದ ಈ ರೀತಿಯ ಮೂರು ಬಣ್ಣ ತಯಾರಿಸಬಹುದು. ಈ ಬಣ್ಣಗಳು ನೈಸರ್ಗಿಕ ಬಣ್ಣಗಾರಿಕೆಯ ವೈವಿಧ್ಯತೆಯನ್ನು ಹೆಚ್ಚಿಸುತ್ತವೆ. ಸೂಕ್ಷ್ಮ ಚರ್ಮದವರಿಗೆ ಈ ಬಟ್ಟೆಗಳು ಆಹ್ಲಾದಕರವೆನ್ನಿಸುವುದು. ಈ ರೀತಿ ಚರಕ ಸಂಸ್ಥೆಯಿಂದ ತಯಾರಾದ ಚೊಗರಿನ ಬಣ್ಣದ ಬಟ್ಟೆ, ಉಡುಪುಗಳು ಕರ್ನಾಟಕ ರಾಜ್ಯಾದ್ಯಂತ ಮಾರಾಟವಾಗುತ್ತಿವೆ. ಬೆಂಗಳೂರಿನಲ್ಲಿ **"ದೇಸಿ"** ಹೆಸರಿನ ಸಂಸ್ಥೆ ಬಸವನ ಗುಡಿ ನಂ. 27, ಪಟ್ಟಾಳಮ್ಮ ಗುಡಿ ಬೀದಿ, ಸೌತ್ ಎಂಡ್ ಸರ್ಕಲ್‌ನಲ್ಲಿ ಪ್ರಾರಂಭವಾಗಿದ್ದು, ಇಲ್ಲಿ ಈ ರೀತಿಯ ಉಡುಪುಗಳು ಮಾರಾಟಕ್ಕಿದೆ.

ಹೆಚ್ಚಿನ ಮಾಹಿತಿಗೆ: ದೂರವಾಣಿ 080–26576669 (ಬೆಂಗಳೂರು) 08183–265602 (ಕಛೇರಿ) ಭೀಮನಕೋಣೆ, ಇಲ್ಲಿಗೆ ಸಂಪರ್ಕಿಸಬಹುದು.

ಸಂಗ್ರಹ: ಸಿದ್ದರಾಜು ತರುಕರುಹಳ್ಳಿ.

ವಿಶೇಷ ಸೂಚನೆ:

(ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ಸುತ್ತಿನ ಸ್ಪರ್ಧೆಗ ಕಳುಹಿಸಿ ಕೊಡಲಾಗುವುದು)

ಅಡಿಕೆ ಹಾಳೆ ಫೈಲ್


ಈಗಾಗಲೇ ಅಡಿಕೆ ಹಾಳೆಯಿಂದ ಊಟದ ತಟ್ಟೆ, ದೊನ್ನೆ, ಟೋಪಿ ಮುಂತಾದ ಉಪಯುಕ್ತ ವಸ್ತುಗಳು ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದಿರುವುದೆ. ಆದರೆ ಶಿರಸಿ ತಾಲ್ಲೋಕಿನ ಅಮ್ಮಿನ ಹಳ್ಳಿಯ ಕುಸುಮಾ ಹೆಗಡೆ ಸಾಯಿಮನೆ ಇವರು ಅಡಿಕೆ ಹಾಳೆಯಿಂದ ಫೈಲ್ ಕೂಡ ತಯಾರಿಸಿದ್ದಾರೆ. ಇದನ್ನು ಬಣ್ಣದ ದಾರ, ಬಟ್ಟೆ ಸೇರಿಸಿ ವಿಶಿಷ್ಟವಾಗಿ ರೂಪಿಸಿದ್ದಾರೆ. ಸಾಧಾರಣ ವಾಗಿ ಫೈಲ್ ಎಂದರೆ ಪ್ಲಾಸ್ಟಿಕ್ ನಿಂದ ಮಾಡಲಾಗಿರುತ್ತದೆ. ಆದರೆ ಅಡಿಕೆ ಫೈಲ್ ಪರಿಸರ ಸ್ನೇಹಿಯಾದದ್ದು, ಹಾಗಾಗಿ ಇದನ್ನು ಹೆಮ್ಮೆಯಿಂದ ಬಳಸ ಬಹುದು. ಅಡಿಕೆ ಹಾಳೆಯಿಂದ ಈ ರೀತಿ ತರತರದ ಉತ್ಪನ್ನವಾದರೆ ಅಡಿಕೆ ಕೃಷಿಕರ ಉದ್ಧಾರಕ್ಕೆ ಏಣಿ ಇಟ್ಟಂತಾಗುತ್ತದೆ.

ಮೂಲ : ಪ್ರಜಾವಾಣಿ 28 ನವೆಂಬರ್ 2006.

ಅಡಿಕೆ ಗೊನೆಯಿಂದ ಕಾಯಿ ಉದುರಿಸುವ ಯಂತ್ರ

ಡಿ.ಪಿ. ಸವ್ಯಸಾಚಿ ಬಿಎಸ್ಸಿ ಕೃಷಿ ಪಧವೀಧರರು. ರಾಜ್ಯದ ಅತ್ಯಂತ ಹಿರಿಯ ಪ್ರಗತಿಪರ ರೈತ ದೇವಂಗಿ ಪ್ರಫುಲ್ಲ ಚಂದ್ರರ ಮೊದಲ ಮಗ ಇವರು. ತಮ್ಮ ಅಡಿಕೆ ತೋಟದಲ್ಲಿ ಸಕ್ರಿಯವಾಗಿ ಕೃಷಿ ಕಾರ್ಯದಲ್ಲಿ ತೊಡಗಿದವರು. ತೋಟದಲ್ಲಿ ಒಂದೇ ಬಾರಿಗೆ ಎಷ್ಟೋ ಸಾವಿರ ಅಡಿಕೆ ಕೊನೆ ಕಟಾವಿಗೆ ಬಂದಿರುತ್ತದೆ. ಇಲ್ಲಿ ಕೊನೆ ಯಿಂದ ಅಡಿಕೆ ಬೇರ್ಪಡಿಸಲು ಕಾರ್ಮಿಕರ ಸಮಸ್ಯೆ. ಕೃಷಿ ಕೆಲಸಗಳೆಲ್ಲ ಒಂದೇ ಕಾಲದಲ್ಲಿ ಪ್ರಾರಂಭವಾಗುವವು. ಕೆಲಸಗಾರರ ಅಗತ್ಯ ಅತಿ ಹೆಚ್ಚಾಗಿದ್ದಾಗಲೇ ಅವರ ಕೊರತೆ ಆಗುತ್ತದೆ. ಜೊತೆಗೆ ದುಭಾರಿಯಾಗುತ್ತಿರುವ ಕೂಲಿ ಹಣ ಕೂಡ. ಅಡಿಕೆ ಉದುರು ಮಾಡಲು ಬಲವಾದ ಆಳುಗಳೇ ಬೇಕಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸತತ ಮೂರು ವರ್ಷಗಳ ಪ್ರಯತ್ನದಿಂದ ಅಡಿಕೆ ಕೊನೆಯಿಂದ ಕಾಯಿ ಬೇರ್ಪಡಿಸವ ಯಂತ್ರವೊಂದನ್ನು ಸವ್ಯಸಾಚಿಯವರು ಆವಿಷ್ಕರಿಸಿದ್ದಾರೆ.

ಒಂದು ಗಂಟೆಗೆ ಸಾವಿರ ಗೊನೆಯ ಅಡಿಕೆ ಉದುರು ಮಾಡುವ ಯಂತ್ರವಿದು. ಇದಕ್ಕೆ ವಿದ್ಯುತ್ ಚಾಲಿತ ಯಂತ್ರವೊಂದಲ್ಲದೆ ಟ್ರಾಕ್ಟರ್ ಟಿಲ್ಲರ್ ಕೂಡ ಅಳವಡಿಸಿಕೊಳ್ಳಬಹುದೆನ್ನುತ್ತಾರೆ. ಡೀಸೆಲ್ ರೂ 36. ಕೂಲಿ 36ರೂ ಸೇರಿದರೆ ಗರಿಷ್ಠ ಸಾವಿರ ಕೊನೆ ಉದುರು ತೆಗೆಯಬಹುದು. ಸವ್ಯ ಸಾಚಿ ಕಂಡುಕೊಂಡ ಈ ಯಂತ್ರಕ್ಕೆ 30 ಸಾವಿರ ಖರ್ಚಾಗಿರುತ್ತದೆ. ಇದು ಸ್ವಲ್ಪ ದೊಡ್ಡ ಪ್ರಮಾಣದ ರೈತರಿಗೆ ಉಪಯುಕ್ತವಾಗಲಿದೆ.



ಹೆಚ್ಚಿನ ವಿವರಗಳಿಗೆ: ಕೃಷಿಕ ಸಂಪದ, ಲಕ್ಷ್ಮೀಪುರ, ಹೊಸಹಳ್ಳಿ, ಶಿವಮೊಗ್ಗ– 577202, ದೂರವಾಣಿ: ಮನೆ:08182–272730, ಕಛೇರಿ : 50214 ಸಂಪರ್ಕಿಸಬಹುದು.

ಅಡಿಕೆ ಆಧಾರಿತ ತಂತ್ರಗಾರಿಕೆ

ಅಡಿಕೆ ವಿಂಗಡಣೆ ಯಂತ್ರ

ಅಡಿಕೆ ಗಾತ್ರಕ್ಕನುಗುಣವಾಗಿ ವಿಂಗಡಿಸುವ ಹೊಸಮಾದರಿ ಯಂತ್ರ ವೊಂದನ್ನು ಕರಾವಳಿ ಪ್ರದೇಶದ ವಿ. ಗೋವಿಂದ್ ಪ್ರಸಾದ್ ತಯಾರಿಸಿದ್ದಾರೆ. ಈ ಯಂತ್ರಕ್ಕೆ ಪೊಗ್ ಸೈಜರ್ ಎಂದು ಹೆಸರಿಸಿದ್ದಾರೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಸುಲಭವಾಗಿ ಸಾಗಿಸಬಹುದೆನ್ನುತ್ತಾರೆ. ಇದು ಅಡಿಕೆಯ ವಿವಿಧ ಗಾತ್ರಗಳಿಗೆ ತಕ್ಕಂತೆ ಆರು ಅಥವಾ ಏಳು ಭಾಗಗಳನ್ನಾಗಿ ವಿಂಗಡಿಸುತ್ತದೆ. ಒಂದು ಗಂಟೆಗೆ 3 ರಿಂದ 4 ಕ್ವಿಂಟಾಲ್ ಅಡಿಕೆಯನ್ನು ವಿಂಗಡಿಸಬಹುದೆನ್ನುತ್ತಾರೆ. ಇದೇ ಮಾದರಿಯನ್ನು ಸುಧಾರಿಸಿದರೆ ಗಂಟೆಗೆ 12 ಕ್ವಿಂಟಾಲ್ ಬೇರ್ಪಡಿಸಬಹುದು ಎನ್ನುವರು ಪ್ರಸಾದ್. ಇಷ್ಟು ಮಾಡಲು ಬೇಕಾಗುವ ವಿದ್ಯುತ್ ಒಂದು ಅಶ್ವಶಕ್ತಿಯಷ್ಟು ಮಾತ್ರ ಎನ್ನುವರು. ಈಗ ಚಾಲ್ತಿಯಲ್ಲಿರುವ ಯಂತ್ರಗಳು 5 ಅಶ್ವಶಕ್ತಿಯಷ್ಟು ವಿದ್ಯುತ್ ಪಡೆಯುತ್ತವೆ. ಈ ಯಂತ್ರಕ್ಕೆ ಹೋಲಿಸಿದರೆ ವರ್ಷಕ್ಕೆ ವಿದ್ಯುತ್ ಬಿಲ್ 30 ಸಾವಿರ ರೂಪಾಯಿ ಉಳಿಸಬಹುದೆನ್ನುವರು. ಈ ಯಂತ್ರ ಶಬ್ದ ಮಾಡದೆ ಕೆಲಸ ಮಾಡುತ್ತದೆ. ಇದರ ಬೆಲೆ ಒಂದು ಲಕ್ಷದ 20 ಸಾವಿರ ರೂಪಾಯಿ ಎನ್ನುವರು. ಈ ಯಂತ್ರದ ಬಗ್ಗೆ ''ಕ್ಯಾಂಪ್ಕೊ'' ಸಂಸ್ಥೆ ಆಸಕ್ತಿವಹಿಸಿ ಸಹಕಾರ ನೀಡುವ ಭರವಸೆ ನೀಡಿದೆ ಹಾಗೂ ಕೃಷಿ ಸಂಸ್ಥೆಯಾದ ''ಯಂತ್ರ ತಂತ್ರ ಪ್ರತಿಷ್ಠಾನ'' ಇದರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ ಎಂದು ಗೋವಿಂದ್ ಪ್ರಸಾದ್ ಹೇಳುತ್ತಾರೆ. ಹೆಚ್ಚಿನ ವಿವರಗಳಿಗೆ: ಪಿ. ಗೋವಿಂದ್ ಪ್ರಸಾದ್, ಅನೀಶ್ ಟೆಕ್ನಾಲಜಿ, ಕೂಡಂಗಾಯಿ, ವಿಟ್ಲ–574243, ದೂರವಾಣಿ : 08255–239552 *ಮೂಲ: ಪ್ರಜಾವಾಣಿ 16 ನವೆಂಬರ್ 2006*

ಅಡಿಕೆ ಹಾಳೆ ಸಿಗಿಯುವ ಯಂತ್ರ

ಕರಾವಳಿ ಮತ್ತು ಮಲೆನಾಡಿನಲ್ಲಿಯೂ ಜಾನುವಾರುಗಳ ಮೇವಿಗೆ ಈಗೀಗ ಬಹಳ ಅಭಾವವಾಗುತ್ತಿದೆ. ಇಂತಹ ಕಾಲದಲ್ಲಿ ದನಗಳು ಬೈಹುಲ್ಲು ತಿನ್ನುವಂತೆ ಅಡಿಕೆ ಹಾಳೆಯನ್ನು ಸಹ ಬಹಳ ಖುಷಿಯಿಂದ ತಿನ್ನುತ್ತವೆ. ಇದನ್ನು ಕಂಡ ದಕ್ಷಿಣ ಕನ್ನಡದ ಕೈತಂಜೆ ಸುಬ್ರಹ್ಮಣ್ಯಭಟ್ಟರು ಅಡಿಕೆ ಹಾಳೆಯನ್ನು ಕತ್ತಿಯಿಂದ ತುಂಬಾ ತ್ರಾಸದಾಯಕವಾಗಿ ಸಿಗಿದು ತಮ್ಮ ಜಾನುವಾರುಗಳಿಗೆ ತಿನ್ನಿಸುತ್ತಿದ್ದರು. ಭಟ್ಟರ ಮಗ ಜಯ ಗೋವಿಂದ ಭಟ್ಟರು. ಇವರ ತಂದೆಯವರು ಹಾಳೆ ಸಿಗಿಯುವ ಕಷ್ಟ ಕಂಡಾಗ ಅದಕ್ಕೊಂದು ಯಂತ್ರ ವೊಂದನ್ನು ಆವಿಷ್ಕರಿಸಿದರು. ಅರ್ಧ ಅಶ್ವಶಕ್ತಿಯ ಈ ಯಂತ್ರದಲ್ಲಿ ಅಡಿಕೆ ಹಾಳೆ ತಳ್ಳಿದಾಗ ಎಂಟತ್ತು ಎಳೆ ಎಳೆಯಾಗಿ ಹೊರ ಬರುತ್ತವೆ. ಇದೇ ರೀತಿ ಗಂಟೆಗೆ ನೂರು ಹಾಳೆ ಸಿಗಿಯಬಹುದೆನ್ನುವರು ಜಯಗೋವಿಂದ್. ಈ ಸಿಗಿದ ಎಳೆಗಳನ್ನು ಒಣಗಿಸಿ ದಾಸ್ತಾನು ಮಾಡ ಬಹುದೆನ್ನುವರು. ಇದನ್ನು ದನಗಳು ಸುಲಭವಾಗಿ ತಿನ್ನಲು ಅನುಕೂಲವಾಗುತ್ತೆ ಎನ್ನುವರು. ಈ ಯಂತ್ರ ತಯಾರಿಸಲು ವೆಚ್ಚ ಐದು ಸಾವಿರವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ: ಜಯ ಗೋವಿಂದ ಭಟ್, ಕುಳ್ಳಂ ಜೆ ಮನೆ, ಮಾಣಿ–ಅಂಚೆ, ಬಂಟ್ವಾಳ ತಾಲೂಕು–574253, ದಕ್ಷಿಣ ಕನ್ನಡ, ದೂರವಾಣಿ : 08255–274356



ಜೇನು ತಂತ್ರಗಾರಿಕೆ

ಜೇನು ಕಡಗೋಲು

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕು ಗುಳಗೊಡ ಗ್ರಾಮದ ಮಹೇಶ್ ಹೆಗಡೆ ಗೊಳಿಕ್ಕೈ ಅವರ ಸುಧಾರಿತ ಜೇನು ತುಪ್ಪ ತೆಗೆಯುವ ಸಾಧನ ವೊಂದನ್ನು ಕಂಡುಕೊಂಡಿದ್ದಾರೆ. ಜೇನು ಪೆಟ್ಟಿಗೆಗಳ ಫ್ರೇಂಗಳಿಂದ ಜೇನು ತುಪ್ಪವನ್ನು ಹೊರ ತೆಗೆಯಲು ಮಾರುಕಟ್ಟೆಯಲ್ಲಿ ದೊರೆಯುವ ದುಬಾರಿ ಬೆಲೆಯ ಯಂತ್ರದ ಹೊರತಾಗಿ ಕಂಡು ಕೊಂಡ ತಂತ್ರಜ್ಞಾನವಿದು. ಇದರ ಮೂಲ ತತ್ವ ಮಜಿಗೆ ಕಡೆಯುವ ಯಂತ್ರ ಕೆಲಸ ಮಾಡುವ ರೀತಿಯಂತಿರುತ್ತದೆ. ಮೊದಲು ಸ್ಟೀಲ್ ಸರಿಗೆ ಇರುವ ಜಾಳಿಗೆ ಯಿಂದ ಎರಡು ಬಾಕ್ಸ್ ತಯಾರಿಸಬೇಕು. ಇದರ ಅಳತೆ ಜೇನು ಕಟ್ಟಿರುವ ಫ್ರೇಮ್ ಗಳಿಗಿಂತ ಸ್ವಲ್ಪ ದೊಡ್ಡದಾಗಿದ್ದು ಅವನ್ನು ಇದರೊಳಗೆ ಸರಾಗವಾಗಿ ತೆಗೆದು ಹಾಕು ವಂತಿರ ಬೇಕು. ಈ ರೀತಿಯ ಎರಡು ಬಾಕ್ಸ್‌ಗಳನ್ನು ಒಂದು ಉದ್ದದ ಕಬ್ಬಿಣ ರಾಡ್‌ಗೆ ವೆಲ್ಡ್ ಮಾಡಿಸಿ ಜೋಡಿಸಬೇಕು. ಈ ಎರಡು ಬಾಕ್ಸ್‌ಗಳೊಳಗೆ ಒಂದೊಂದು ಜೇನು ರಸ ತುಂಬಿರುವ ಫ್ರೇಂ ಗಳನ್ನು ನಿಧಾನವಾಗಿ ಇಳಿಸಿ ಉದ್ದದ ರಾಡನ್ನು ಚಿತ್ರದಲ್ಲಿ ತೋರಿಸಿರುವಂತೆ ಪಾತ್ರೆಯಲ್ಲಿ ನಿಲ್ಲಿಸಿ. ಮೇಲಿನ ತುದಿಯನ್ನೂ ಮಜ್ಜಿಗೆ ಕಡೆಯುವ ಯಂತ್ರ ಅಥವಾ ವೆಲ್ಡಿಂಗ್ ಯಂತ್ರ ಏನೂ ಸಿಗದಿದ್ದಲ್ಲಿ ಕೈಯಿಂದಾದರೂ ಸರಿ ನಿಧಾನವಾಗಿ ತಿರುಗಿಸುತ್ತಾ ಬಂದರೆ ಜೇನು ರಸ ಕೆಳಗಿನ ಪಾತ್ರೆಯೊಳಗೆ ಹರಿದು ಬಂದು ಶೇಖರಣೆ ಯಾಗುವುದು. ಹೆಚ್ಚಿನ ವಿವರಗಳಿಗೆ ಮಹೇಶ್ ಅವರ ದೂರವಾಣಿ: 08389–231325, ಮೊಬೈಲ್: 9449916118 ಮೂಲಕ ಸಂಪರ್ಕಿಸಬಹುದು.



ಜೇನು ಪೆಟ್ಟಿಗೆ

ದಕ್ಷಿಣ ಕನ್ನಡ ಜಿಲ್ಲೆ ಬಂಟವಾಳ ತಾಲೂಕು ಮೂಡ್ನೂರು ಗ್ರಾಮದ ಪೆರ್ವಾಜಿ ಈಶ್ವರ ಭಟ್ಟರು ಹತ್ತು ರೂ ವೆಚ್ಚದಲ್ಲಿ ಜೇನು ಪೆಟ್ಟಿಗೆಯನ್ನು ಕಂಡು ಕೊಂಡಿದ್ದಾರೆ. ಈ ಪೆಟ್ಟಿಗೆಯಲ್ಲಿ ಐದಾರು ಲೀಟರ್ ಜೇನು ತೆಗೆಯಬಹುದೆನ್ನುತ್ತಾರೆ. ತೋಟದಲ್ಲಿ 30–40 ಪೆಟ್ಟಿಗೆಗಳಿವೆ. ಭಟ್ಟರು ಪೆಟ್ಟಿಗೆಗೆ ಜೇನು ಕೂರಿಸಿಲ್ಲ, ಅವಾಗಿಯೇ ಬಂದು ಕೂತಿವೆ ಎನ್ನುವರು. ಪೆಟ್ಟಿಗೆಗಳು ಬೇಸಿಗೆಯಲ್ಲಿ ಹೆಚ್ಚು ಬಿಸಿ ಆಗದಿರಲಿ ಎಂದು ಅಡಿಕೆ ಹಾಳೆಯನ್ನು ಸುತ್ತಿಟ್ಟಿದ್ದಾರೆ. ಪೆಟ್ಟಿಗೆಯ ಹಾಗೆಯೇ ಅವುಗಳನ್ನು ಸುತ್ತಿಟ್ಟಿದ್ದಾರೆ. ಅವುಗಳಿಗಾಗಿ ಕಂಬನೆಟ್ಟಿಲ್ಲ, ಅವುಗಳ ಬುಡದಲ್ಲಿ ನೀರು ನಿಲ್ಲಿಸಿಲ್ಲ, ಇರುವೆ ಕೀಟ ಹತ್ತದಿರಲಿ ಎಂದು ಡಿಡಿಟಿ ಸುರಿದಿಲ್ಲ, ಬರೀ ಒಂದು ಹಗ್ಗದಲ್ಲಿ ನೇತಾಡಿಸುತ್ತಿದ್ದಾರೆ. ಒಂದು ಬದಿಗೆ ರೂಪಾಯಿ ಪಾವಲಿಯಷ್ಟು ಅಗಲದ ತೂತು ಕೊರೆದಿದ್ದಾರೆ. ಅದೇ ಬಾಗಿಲು ಕಿಟಕಿ ಎಲ್ಲವೂ. ಇದೊಂದು ಲಾಭದ ಕೃಷಿ ಎನ್ನುವರು ಭಟ್ಟರು. ಈ ಮಾದರಿ ಕೃಷಿಕರಿಗೆ ಹೆಚ್ಚು ಪ್ರಯೋಜನಕಾರಿ ಆಗಬಹುದೆನ್ನುತ್ತಾರೆ. ಹೆಚ್ಚಿನ ವಿವರಗಳಿಗೆ ಇವರ ದೂರವಾಣಿ: 08255–239165 ಮೂಲಕ ಸಂಪರ್ಕಿಸಿರಿ.

ಮೂಲ: ಪ್ರಜಾವಾಣಿ 22–06–2005

(ವಿ. ಸೂ. ಈ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ಸುತ್ತಿನ ಸ್ಪರ್ಧೆಗೆ ಕಳುಹಿಸಿ ಕೊಡಲಾಗುವುದು)

ಸಸ್ಯಗಳಿಗೆ ತಂಬಾಕು ಬಳಕೆ

ಕೊಪ್ಪಳ ಜಿಲ್ಲೆ ಕುಷ್ಟಗಿಯ ರೈತ ಜಗನ್ನಾಥ್ ಎಂಬುವರು ದಾಳಿಂಬೆ ಗಿಡಗಳಿಗೆ ಬಾಧಿಸುವ ಬೇರುಹುಳು (Root grub) ಜಂತುಹುಳು (Root knot Nematodes) ಮತ್ತು ಕಾಂಡ ಕೊರಕ (Stem borer) ಗಳ ನಿಯಂತ್ರಣಕ್ಕೆ ಕೀಟ ನಾಶಕವಾಗಿ ತಂಬಾಕನ್ನು ಬಳಸಿ ಪರಿಹಾರ ಕಂಡುಕೊಂಡಿದ್ದಾರೆ.

ತಂಬಾಕು ಮಣ್ಣಿನಲ್ಲಿ ಬೆರೆತು ಕ್ರಮೇಣ ಸಾವಯವ ಗುಣವನ್ನು ಪಡೆದು ಕ್ರಿಮಿ ಕೀಟಗಳಿಗೆ ತಡೆ ಗೋಡೆ ನಿರ್ಮಿಸುತ್ತದೆಯಂತೆ. ನಂತರ ಬೇರು ವಿಸ್ತಾರವಾಗಿ ಹಬ್ಬಿ ಗಿಡಕ್ಕೆ ಸಮೃದ್ಧವಾಗಿ ಸಾರವನ್ನು ಒದಗಿಸುತ್ತದೆಂದು ಹೇಳುವರು. ಇವರು ತಮ್ಮ ತೋಟದ ದಾಳಿಂಬೆ ಗಿಡಗಳಿಗೆ ಇದನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ. ಭೂಮಿ ಹಸಿ ಇರುವಾಗ ಗಿಡವೊಂದಕ್ಕೆ ಸುಮಾರು ಒಂದು ಕಿಲೋದಷ್ಟು ತಂಬಾಕನ್ನು ಮಣ್ಣಿಗೆ ಸೇರಿಸಿ ತೆಳುವಾಗಿ ಮಣ್ಣು ಮುಚ್ಚುತ್ತಾರೆ. ಕೆಲವು ದಿನಗಳ ನಂತರ ಮಣ್ಣಿನಲ್ಲಿರುವ ಉಪದ್ರವ ಹುಳ, ಕ್ರಿಮಿ ಕೀಟಗಳು ನಾಶವಾಗಿರುತ್ತವೆ ಎಂದು ಜಗನ್ನಾಥ್ ಹೇಳುತ್ತಾರೆ. ತಾಜಾ ತಂಬಾಕು ದುಬಾರಿ ಎನ್ನಿಸಬಹುದು. ಹಾಗಾಗಿ ನಿರುಪಯುಕ್ತ ಅಗ್ಗದ ತಂಬಾಕು ಹಾಕಿದರೂ ಇದೆ ಪರಿಣಾಮ ಬೀರ ಬಹುದಂತೆ. ತಂಬಾಕು ಬೆಲೆ ಇಳಿದಾಗಲಂತೂ ದಾಳಿಂಬೆ ಗಿಡಗಳ ತಂಬಾಕು ಮೆಲ್ಲುವ ಈ ಚಿಕಿತ್ಸೆ ಮತ್ತಷ್ಟೂ ಪ್ರೋತ್ಸಾಹ ಸಿಗಬಹುದು. ಇನ್ನೂ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ದೂರವಾಣಿ 9448337081ರ ಮೂಲಕ ಜಗನ್ನಾಥ್‌ರವರನ್ನು ಸಂಪರ್ಕಿಸಬಹುದು.

ಮೂಲ: ಪ್ರಜಾವಾಣಿ 01 ಫೆಬ್ರವರಿ 2006

ಅಡಿಕೆ ಕೊಳೆ ರೋಗಕ್ಕೆ ಗೇರು ಸಿಪ್ಪೆಯ ಕಷಾಯ

ಅಡಿಕೆ ಕೃಷಿಕರಿಗೆ ಮಾರಕವಾದ ಕೊಳೆರೋಗ ಸಂಕಷ್ಟ ತಂದೊಡ್ಡಿದೆ. ಈ ಸಮಸ್ಯೆಗೆ ಎದೆಗುಂದದೆ ಪರಿಹಾರಕ್ಕಾಗಿ ಪ್ರಯತ್ನಿಸಿ ಗೆದ್ದವರೂ ಕೃಷಿಕ ಹಾಗೂ ಆರ್ಯುರ್ವೇದ ವೈದ್ಯಬಲ್ಲ ದಕ್ಷಿಣ ಕನ್ನಡದ ಬದನಾಜೆ ಶಂಕರ ಭಟ್ಟರು. ಇವರು ಗೇರು ಬೀಜದ ಎಣ್ಣೆಯನ್ನು ಆಯುರ್ವೇದ ಔಷಧಿಗಳಲ್ಲಿ ಬಳಕೆ ಮಾಡಲಾಗುತ್ತಿರುವ ಕ್ರಮವನ್ನೇ ಅನುಸರಿಸಿಕೊಂಡು ಈ ಕೊಳೆರೋಗ ನಿಯಂತ್ರಣಕ್ಕೆ "**ಫಲಿನಿ**" ಎಂಬ ಕೀಟನಾಶಕವೊಂದನ್ನು ಆವಿಷ್ಕರಿಸಿದ್ದಾರೆ.

ಈ ಫಲಿನಿ ಕೊಳೆರೋಗ ಮತ್ತು ಫಸಲು ಉದುರುವಿಕೆ ತಡೆಯಲು ಸಹಕಾರಿಯಾಗಿದೆ ಎನ್ನುತ್ತಾರೆ. ಇದನ್ನು ಭಟ್ಟರು ಏಳೆಂಟು ವರ್ಷಗಳಿಂದ ಪ್ರಯೋಗ ನಡೆಸಿಕೊಂಡು ಬಂದಿದ್ದಾರೆ. ಇದರಿಂದ ಉತ್ತಮ ಫಲಿತಾಂಶ ದೊರೆತಿರುವುದಾಗಿ ತಿಳಿಸಿದ್ದಾರೆ. ಗೇರುಸಿಪ್ಪೆಯ ಎಣ್ಣೆ, ಅರಿಶಿಣ, ನೊರೆಕಾಯಿ ಮತ್ತಿತರ ಗಿಡಮೂಲಿಕೆಗಳ ಮಿಶ್ರಣವನ್ನು ಕುದಿಸಿ ಕಷಾಯ ತಯಾರಿಸ ಲಾಗುತ್ತದೆ. ಇವರು ಅಡಿಕೆಯ ಕೊಳೆರೋಗ ತಡೆಯಲು ಮಳೆಗಾಲದಲ್ಲಿ ಪಿಂಪಡಿಸಿದರೇ ಫಸಲು ಉದುರುವಿಕೆ ತಡೆಯಲು ಸಿಂಗಾರಕ್ಕೆ ಸಿಂಪಡಿಸುತ್ತಾ ಬಂದಿರುವರು.

ಈ ಫಲಿನಿ ಈಗಾಗಲೇ ಮಾರಾಟಕ್ಕೆ ಲಭ್ಯವಿದ್ದು, ಒಂದು ಲೀಟರ್‌ನ ಬೆಲೆ ಹತ್ತು ರೂಪಾಯಿ. ಒಂದು ಎಕರೆ ಅಡಿಕೆ ತೋಟಕ್ಕೆ ಸುಮಾರು 10 ರಿಂದ 15 ಲೀಟರ್ ಸಾಕೆನ್ನುತ್ತಾರೆ. ಕೃಷಿಕರಿಗೆ ಕಡಿಮೆ ವೆಚ್ಚದಲ್ಲಿ ಸಿಗಬಹುದಾದ ಈ ದ್ರಾವಣ ರೈತ ಮತ್ತು ಪರಿಸರ ಸ್ನೇಹಿಯೂ ಕೂಡ ಆಗಿದೆ ಎನ್ನವರು ಶಂಕರ ಭಟ್ಟರು.

ಈ ಫಲಿನಿ ಉಪಯೋಗಿಸಿದ ಉಜಿರೆಯ ರೈತರಾದ ಗ್ರೇಸಿ ಹಾಗೂ ಮಿತ್ತಬಾಗಿಲ ಧರ್ಮರಾಜಶೆಟ್ಟಿ ತಮ್ಮ ಅನುಭವ ಹಂಚಿಕೊಂಡಿರುವರು. ಇವರ ಪ್ರಕಾರ ಕಳೆದ ವರ್ಷ ಒಂದು ಪ್ರದೇಶಕ್ಕೆ ಬೋರ್ಡೋ ಸಿಂಪಡಿಸಿದ್ದರೂ ಅಲ್ಲಿ ಕೊಳೆ ರೋಗ ಕಾಣಿಸಿಕೊಂಡಿತ್ತಂತೆ. ಹಾಗೆಯೇ ಇನ್ನೊಂದು ಪ್ರದೇಶಕ್ಕೆ ಫಲಿನಿ ಪ್ರಯೋಗಿಸಿದ್ದು ಇದರಲ್ಲಿ ಇದುವರೆಗೂ ಕೊಳೆ ಕಾಣಿಸಿಕೊಂಡಿಲ್ಲ ಹಾಗೆಯೇ ಫಸಲು ಕೂಡ ಉದುರಿಲ್ಲ ಎನ್ನುವರು. ಈಗಾಗಲೇ ಕಳೆದೆರಡು ವರ್ಷಗಳಿಂದ ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆಗಳ ನೂರಾರು ರೈತರು ಕೊಳೆರೋಗ ಹಾಗೂ ಫಸಲು ಉದುರುವಿಕೆ ತಡೆಯಲು ಈ ಫಲಿನಿ ಬಳಕೆ ಮಾಡುತ್ತಿದ್ದಾರಂತೆ. ಈ ವರ್ಷದಲ್ಲಿ ಸಾವಿರಾರು ಲೀಟರ್ ಫಲಿನಿಯನ್ನು ರೈತರು ಖರೀದಿಸಿದ್ದಾರೆನ್ನುತ್ತಾರೆ ಶಂಕರಭಟ್ಟರು. ಇನ್ನೂ ಹೆಚ್ಚಿನ ಮಾಹಿತಿಗೆ : ಪಿ. ಶಂಕರ ಭಟ್, ಬದನಾಜೆ, ವಿಟ್ಲ್, ದಕ್ಷಿಣಕನ್ನಡ ಜಿಲ್ಲೆ ದೂರವಾಣಿ 08255–239229, ಸಂಪರ್ಕಿಸಬಹುದು.

ಮೂಲ : ಪ್ರಜಾವಾಣಿ 06 ಸೆಪ್ಟೆಂಬರ್ 2006

ಅಡಿಕೆ ಕೊಳೆ ನಿಯಂತ್ರಣಕ್ಕೆ ಹಾಳೆಕೊಟ್ಟೆ

ಮಲೆನಾಡು ಹಾಗೂ ಕರಾವಳಿಯಲ್ಲಿ ಮಳೆ ಪ್ರಾರಂಭವಾದರೆ ಆತಂಕ ಪ್ರಾರಂಭವಾಗುತ್ತದೆ. ಅಡಿಕೆ ಮರಗಳಲ್ಲಿನ ಕೊಳೆರೋಗ ನಿಯಂತ್ರಣಕ್ಕೆ ಬೋರ್ಡೋ ದ್ರಾವಣ ಸಿಂಪಡಿಸುವುದು ಪ್ಲಾಸ್ಟಿಕ್ ಕೊಟ್ಟೆ ಕಟ್ಟುವುದು. ಇವರ ಆತಂಕದ ಕೆಲಸವಾಗಿರುತ್ತದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕು ಹೆಗ್ಗಾರು ಹಳ್ಳಿಯ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಬೋರ್ಡೋ ದ್ರಾವಣ ಅಥವಾ ಪ್ಲಾಸ್ಟಿಕ್ ಕೊಟ್ಟೆ ಇದೂವರೆಗೂ ಉಪಯೋಗಿಸಿಲ್ಲ. ಇವರ ಕುಟುಂಬದವರು ಹಿಂದಿನಿಂದಲೂ ಅಡಿಕೆ ಹಾಳೆ ಕೊಟ್ಟೆ ಮಾಡಿ ಕಟ್ಟುತ್ತಿದ್ದರು. ಈ ಸಾಂಪ್ರದಾಯಿಕ ಪದ್ಧತಿಯನ್ನು ಭಟ್ಟರು ಮುಂದುವರಿಸಿಕೊಂಡು ಬಂದಿದ್ದಾರೆ. ಇವರು ಸುಮಾರು ನಲವತ್ತಕ್ಕೂ ಹೆಚ್ಚು ವರ್ಷಗಳಿಂದ ಅಡಿಕೆಯ ಕೊಳೆರೋಗ ನಿಯಂತ್ರಣಕ್ಕೆ ಅಡಿಕೆ ಹಾಳೆ ಕೊಟ್ಟೆ ಕಟ್ಟಿಕೊಂಡು ಬಂದಿದ್ದಾರೆ.

ಭಟ್ಟರು ಅಡಿಕೆ ಗೊನೆಗಳಿಗೆ ಹಾಳೆಕೊಟ್ಟೆಯನ್ನು ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳವರೆಗೂ ಕಟ್ಟುತ್ತಾರೆ. ಜನವರಿ ತಿಂಗಳಿಂದ ಅಡಿಕೆ ಸೋಗೆಗಳು ಹಣ್ಣಾಗಿ ಉದುರಲು ಪ್ರಾರಂಭಿಸುತ್ತವೆ. ಭಟ್ಟರು ಹಾಳೆ ಕೊಟ್ಟೆ ತಯಾರಿಸಲು ಜನವರಿಯಿಂದ ಮೇ ತಿಂಗಳವರಗೆ ಸೊಗೆಗಳನ್ನು ಆಯ್ದುಕೊಳ್ಳುತ್ತಾರೆ, ಇವುಗಳನ್ನು ಮೊದಲು ಬಿಸಿಲು ಮಳೆ ಬೀಳದ ಜಾಗದಲ್ಲಿ ಸಂಗ್ರಹಿಸುತ್ತಾರೆ. ಮುಂಗಾರು ಆರಂಭದ ಪೂರ್ವದಲ್ಲಿ ಈ ಸೋಗೆಯಿಂದ ಹಾಳೆಗಳನ್ನು ಕಡಿದುಕೊಳ್ಳುತ್ತಾರೆ. 20 ಹಾಳೆಗಳನ್ನು ಒಂದು ಕವಳಿಗೆಯಂತೆ ಜೋಡಿಸಿಕೊಂಡು, ಇಂತಹ ಎಳೆಂಟು ಕವಳಿಗೆಯನ್ನು ಒಂದು ಹೊರೆಯಾಗಿ ಮಾಡಿಕೊಳ್ಳುತ್ತಾರೆ. ಆರು ಅಡಿ ಉದ್ದ ಎರಡು ಇಂಚು ಅಗಲದ ಕಾಡು ಬಾಳೆ ಮರಗಳನ್ನು ಕಡಿದು ಬಳ್ಳಿಗಳನ್ನು ಮಾಡಿಟ್ಟುಕೊಳ್ಳುವರು. ಹಾಗೆಯೆ ಹಾಳೆ ಕೊಟ್ಟೆ ತಯಾರಿಗೆ ಬಿದಿರು ಕಡ್ಡಿಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಭಟ್ಟರು ಹೊರೆ ಕಟ್ಟಿಕೊಂಡಿದ್ದ ಹಾಳೆಯನ್ನು ನೀರಿನಲ್ಲಿ ನೆನೆಯಿಸಿ ಮೃದುಮಾಡಿಕೊಳ್ಳುತ್ತಾರೆ. ನಂತರ ಬಿದಿರು ಕಡ್ಡಿಯ ಸಹಾಯದಿಂದ ಒಂದು ಉದ್ದ ಹಾಳೆ ಹಾಗೂ ಒಂದು ಗಿಡ್ಡ ಹಾಳೆಯನ್ನು ಜೋಡಿಸುತ್ತಾರೆ. ಇದನ್ನು ಕಾಲಿನಿಂದ ಮೆಟ್ಟಿಕೊಂಡು ಬಾಗಿಸಿ ಚಂದ್ರಕಾರ ಬರುವಂತೆ ಮಾಡುವರು. ಇದನ್ನು ಮಧ್ಯದಲ್ಲಿ ಕೊಯ್ಯುವರು ಇದಕ್ಕೆ 'ಕಣ್ಣು'ಎನ್ನುವರು. ಹೀಗೆ ಕೊಯ್ದು ಹಾಳೆಗೆ ಆಚೆ ಈಚೆ ಬಿದಿರು ಕಡ್ಡಿಯನ್ನು ಪೋಣಿಸಿ ಕೊಟ್ಟೆ ತಯಾರಿಸಿಕೊಳ್ಳುವರು.

ಕೊಳೆ ನಿಯಂತ್ರಣಕ್ಕೆ ಬೋರ್ಡೋ ದ್ರಾವಣ ಸಿಂಪಡಿಸಿದರು. ಈ ದ್ರಾವಣ 45 ದಿನಗಳವರೆಗೆ ಮಾತ್ರ ಪರಿಣಾಮಕಾರಿ. ಮತ್ತೆ ಮತ್ತೆ ದ್ರಾವಣ ಸಿಂಪಡಿಸುತ್ತಿರಬೇಕು. ಹಾಗಾಗಿ ಖರ್ಚು, ಆರೋಗ್ಯ, ಪರಿಸರ ಈ ಎಲ್ಲಾ ದೃಷ್ಟಿಯಿಂದಲೂ ಹಾಳೆ ಕೊಟ್ಟೆ ಕಟ್ಟುವುದು ಉತ್ತಮವೆನ್ನುತಾರೆ ಭಟ್ಟರು.

ಮೂಲ : ಮತ್ತಿಗಾರ ನಾಗರಾಜ್, ವಿಜಯಕರ್ನಾಟಕ 30 ಆಗಸ್ಟ್ 2006.

ಬೆಂಡೆ ಗಿಡ ರಕ್ಷಣೆಗೆ ಅರಿಶಿಣ

ವೈರಸ್‌ನಿಂದಾಗಿ ಬೆಂಡೆಯ ಗಿಡ ಹಳದಿಯಾಗುತ್ತದೆ. ಇದನ್ನು ತಡೆಯಲು ಬೆಂಡೆಯ ಬೀಜ ಬಿತ್ತುವಾಗಲೇ ಸಾಲಿನಲ್ಲಿ ಅರಿಶಿಣವನ್ನು ಬೆಳಸುವ ಕ್ರಮದಿಂದ ದಕ್ಷಿಣ ಕನ್ನಡದ ಶ್ರೀಮತಿ ವಿದ್ಯಾಲಕ್ಷ್ಮಿ ಎಂಬುವರು ಪರಿಹಾರ ಕಂಡುಕೊಂಡಿದ್ದಾರೆ. ಈ ಕ್ರಮವನ್ನು ಇವರು ಕಳೆದ 10 ವರ್ಷಗಳಿಂದ ಅನುಸರಿಸುತ್ತಲಿರುವರು. ಮಳೆಗಾಲದಲ್ಲಿ ತರಕಾರಿ ಬೆಳೆಯುವಾಗ ಅದರೊಂದಿಗೆ ಅರಿಶಿಣಗಿಡವನ್ನು ನೆಟ್ಟಲ್ಲಿ ಕೀಟ, ಹುಳುಗಳ ಕಾಟದಿಂದ ತರಕಾರಿಯ ರಕ್ಷಣೆ ಆಗುವುದು ಮತ್ತು ಹೆಚ್ಚಿನ ಶ್ರಮವಿಲ್ಲದೆ ಅರಿಶಿಣವನ್ನು ಬೆಳೆಯಬಹುದಂತೆ. ಹೆಚ್ಚಿನ ವಿವರಗಳಿಗೆ ಇವರನ್ನು ದೂರವಾಣಿ 08251–254274 ಮೂಲಕ ಸಂಪರ್ಕಿಸಬಹುದು.

ಮೂಲ : ಅಡಿಕೆ ಪತ್ರಿಕೆ ಜೂನ್ 2006, ಪುಟ 28

ಗಿಡ ಹೇನು ತಡೆಯಲು ದಾಲ್ಚಿನ್ನಿ

ಗುಜರಾತ್ ರಾಜ್ಯದ ಪ್ರಹ್ಲಾದ್ ಬಾಯಿ ಪಟೇಲ್‌ರವರು ಮೂಲಂಗಿಯಲ್ಲಿ ಗಿಡ ಹೇನಿನ (Aphids) ಹಾವಳಿಯನ್ನು ತಡೆಯಲು ಒಂದು ಉಪಾಯ ಕಂಡು ಹಿಡಿದಿರುವರು. ಇವರ ಪ್ರಕಾರ ಉಪಯೋಗಕ್ಕೆ ಬಾರದ 500 ಗ್ರಾಂ ದಾಲ್ಚಿನ್ನಿ ಮತ್ತು 250 ಗ್ರಾಂ ತಂಬಾಕು ಪುಡಿಯನ್ನು ಒಂದು ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಕಷಾಯ ತಯಾರಿಸ ಬೇಕು. ನಂತರ 10 ಲೀಟರ್ ನೀರನ್ನು ಆರಿದ ಈ ಕಷಾಯಕ್ಕೆ ಹಾಕಿ ಚೆನ್ನಾಗಿ ಕುಲುಕಿಸಿದ ನಂತರ ಬೆಳೆಗಳಿಗೆ ಸಿಂಪಡಿಸಬೇಕು. ಒಂದೆರಡು ದಿನಗಳಲ್ಲಿ ಇದರ ಪರಿಣಾಮ ಗೊತ್ತಾಗುತ್ತದೆ ಹಾಗೂ ಕೀಟಗಳು ನಾಲ್ಕು ದಿನದೊಳಗೆ ಸಂಪೂರ್ಣ ನಾಶ ಹೊಂದುತ್ತವೆಂತೆ. ಈ ಪದ್ಧತಿಯನ್ನು ಈ ರೈತರು ಸುಮಾರು 25–30 ವರ್ಷಗಳಿಂದ ಅನುಸರಿಸುತ್ತಿದ್ದಾರೆ.

ಮೂಲ: ಹನಿ ಬೀ 17 (1) (2) ಜನವರಿ – ಜೂನ್ 2006, ಪುಟ 44

ಭತ್ತದ ಕೀಟಕ್ಕೆ ಕತ್ತಾಳೆ ರಸ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ್ಣದ ಲಿಂಗಮಾದಯ್ಯ ಅಪ್ಪಟ ಸಾವಯವ ಕೃಷಿಕರು. ಇವರು ಮೈಸೂರು ಮಲ್ಲಿಗೆ ಭತ್ತದ ತಳಿ ಅಭಿವೃದ್ಧಿ ಪಡಿಸಿದ ತಳಮಟ್ಟದ ವಿಜ್ಞಾನಿ. ಇವರು ಭತ್ತದ ಗದ್ದೆಯಲ್ಲಿ ಕತ್ತಾಳೆಯಿಂದ ಸಾವಯವ ಗೊಬ್ಬರ ಹಾಗೂ ಔಷಧಿಯಾಗುವಂತಹ ಉಪಯೋಗವನ್ನು ಕಂಡುಕೊಂಡಿದ್ದಾರೆ. ಭತ್ತ ನಾಟಿ ಮಾಡಿದ ನಂತರ ಕತ್ತಾಳೆಯನ್ನು ಗೇಣುದ್ದ ಕತ್ತರಿಸಿ ಕೊಂಡಿದ್ದು, ಪ್ರತಿ ಸಾಲಿನ ಮಧ್ಯ ಕೆಸರಿನಲ್ಲಿ ಮಾರಿಗೊಂದರಂತೆ ಹಾಕಿರುತ್ತಾರೆ. ಕೆಸರಿನಲ್ಲಿ ಕರಗಿದ ಕತ್ತಾಳೆ ರಸದ ವಾಸನೆಗೆ ಕೀಟ ಭಾದೆ ಕಂಡು ಬರುವುದಿಲ್ಲವಂತೆ ಹಾಗೆ ಕತ್ತಾಳೆ ರಸ ನೀರಿನಲ್ಲಿ ಬೆರೆತರೆ ಬೆಳೆಗೆ ತಗುಲುವ ಶಿಲೀಂದ್ರ ರೋಗ ಬರುವುದಲ್ಲವೆನ್ನುತ್ತಾರೆ. ಹಾಗೆ ಇದರಿಂದ ಬೆಳೆಗೆ ಹಲವು ಪೌಷ್ಠಿಕಾಂಶಗಳೂ ಲಭ್ಯವಾಗಿ ಹಚ್ಚ ಹಸುರಾಗಿ ಬೆಳೆಯತ್ತದೆ ಎನ್ನವರು. ಅನುಭವಿ ಲಿಂಗಮಾದಯ್ಯನವರು.

ಜತ್ರೋಪಾದಿಂದ ಬೆಳೆ ರಕ್ಷಣೆ

ಗುಜರಾತ್ ರಾಜ್ಯದ ರಜನಿಕಾಂತ್ ಉಷಾಬಾಯಿ ಪಟೇಲ್ ಅವರು ಮೂರು ಕೆ.ಜಿ. ಜತ್ರೊಪಾ ಬೀಜದಿಂದ ಕಷಾಯವನ್ನು ತಯಾರಿಸಿ ಭತ್ತ ಮತ್ತು ಹತ್ತಿಯಲ್ಲಿ ಕಂಡು ಬರುವ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಬಳಸುತ್ತಿದ್ದಾರೆ. ಇವರ ಪ್ರಕಾರ ಈ ಮಿಶ್ರಣವನ್ನು 5 ಲೀಟರ್ ನೀರಿನಲ್ಲಿ ಹಾಕಿ ಬಿಸಿ ಮಾಡಬೇಕು. ನಂತರ ಸುಮಾರು 200 ಮಿಲಿ. ಲೀಟರ್ ದ್ರಾವಣವನ್ನು 15 ಲೀಟರ್ ನೀರಿನಲ್ಲಿ ಸೇರಿಸಿ ಸಿಂಪಡಿಸುವುದರಿಂದ ಭತ್ತ ಮತ್ತು ಹತ್ತಿ ಬೆಳೆಯಲ್ಲಿ ಕೀಟ ನಿಯಂತ್ರಿಸಬಹುದಂತೆ.

ಇದಲ್ಲದೆ ರಜನಿಕಾಂತ್‌ರವರು 5 ಲೀಟರ್ ಜತ್ರೊಪಾ ದ್ರಾವಣಕ್ಕೆ ಸುಮಾರು 50 ಗ್ರಾಂ ಸೋಪ್‌ನಟ್ ಪೌಡರ್ ಅಥವಾ ಡಿಟರ್ಜೆಂಟ್ ಪೌಡರನ್ನು ಸೇರಿಸಿ ನಂತರ 500 ಮಿ.ಲಿ.ಸೀಮೆಎಣ್ಣೆಯನ್ನು ಸೇರಿಸುತ್ತಾರೆ. ನಂತರ ಈ ದ್ರಾವಣವನ್ನು ಮೆಣಸಿನಕಾಯಿ ಮಾವು, ದಾಳಿಂಬೆ, ಬೆಳೆಗಳಿಗೆ ಸಿಂಪಡಿಸಿ ಆ ಮೂಲಕ ರಕ್ಷಣೆ ಮಾಡುತ್ತಾರೆ.

ಮೂಲ: ಹನಿ ಬೀ 17 (1) (2) ಜನವರಿ–ಜೂನ್ 2006 ಪುಟ –43

ನಾಟಿ ಸೊಳ್ಳೆ ಬತ್ತಿ

ಹಾಸನ ಜಿಲ್ಲೆ ಬೇಲೂರು ತಾಲೂಕು ಹಳೇಬೀಡು ಹೋಬಳಿಯ ಮಲ್ಲಿಕಾರ್ಜುನಪುರ ಗ್ರಾಮದ ಶ್ರೀ ಶಾಂತೇಗೌಡರು ಸೊಳ್ಳೆ ನಿವಾರಣೆಗೆ ಸರಳೋಪಾಯವೊಂದನ್ನು ಕಂಡುಕೊಂಡಿದ್ದಾರೆ.

ಇವರು ಒಂದು ಕಿಲೋದಷ್ಟು ಬೇವಿನ ಸೊಪ್ಪನ್ನು ಕುಟ್ಟಿ ಅದಕ್ಕೆ ದೇಶೀಯ ಆಕಳ ಗಂಜಲ ಒಂದು ಲೀಟರ್, 250 ಗ್ರಾಂ ಅರಿಶಿಣ ಪುಡಿ ಇಷ್ಟನ್ನೂ ಐದು ಕಿಲೋ ದೇಶೀಯ ದನದ ಸಗಣಿಯೊಂದಿಗೆ ಮಿಶ್ರ ಮಾಡಿ ಮುದ್ದೆ ಮಾಡಿ, ಎರಡಂಗುಲ ಅಗಲ,ಅರ್ಧ ಅಡಿ ಎತ್ತರದ ನಾಟಿ ಸೊಳ್ಳೆ ಬತ್ತಿ ತಯಾರಿಸಿಕೊಳ್ಳುತ್ತಾರೆ. ಇದನ್ನು ಅವರಿಗೆ ಎಷ್ಟು ಬೇಕೋ ಅಷ್ಟು ತಯಾರಿಸಿಕೊಂಡು ಒಣಗಿಸಿ ಶೇಖರಿಸಿಟ್ಟುಕೊಳ್ಳುತ್ತಾರೆ. ಇವರು ಸಂಜೆ ಸೊಳ್ಳೆ ಬರುವ ಮುನ್ನ ದನದ ಕೊಟ್ಟಿಗೆಯಲ್ಲಿ ಬತ್ತಿಯನ್ನು ಹಚ್ಚುವರು. ಬತ್ತಿ ನಿಧಾನವಾಗಿ ಉರಿದು ಹೊಗೆ ಕೊಟ್ಟಿಗೆಯಲ್ಲಿ ತುಂಬಿಕೊಳ್ಳುತ್ತದೆ. ಹೊಗೆಯಲ್ಲಿ ಬೇವು ಮತ್ತು ಅರಿಶಿಣದ ವಾಸನೆಗೆ ಸೊಳ್ಳೆ ಒಳಗಡೆ ಬರುವುದು ಕಡಿಮೆಯಾಗುತ್ತದೆ ಎನ್ನುತ್ತಾರೆ. ಹಾಗೆಯೇ ವಾಸದ ಮನೆಯಲ್ಲಿಯೂ ಕೂಡ ಹಚ್ಚಿದರೆ ಸೊಳ್ಳೆಯಿಂದ ಮುಕ್ತಿ. ಜೊತೆಗೆ ಮಾನವರ ಆರೋಗ್ಯಕ್ಕೆ ತುಂಬಾ ಒಳ್ಳೆಯದೇ ಹೊರತು ದುಷ್ಪರಿಣಾಮವಿಲ್ಲ ಎನ್ನುತ್ತಾರೆ ಗೌಡರು. ಸಾಮಾನ್ಯವಾಗಿ ಹೊಗೆ ಕುಡಿಯುವುದರಿಂದ ಶೀತ, ಕೆಮ್ಮು ನೆಗಡಿ, ಗಂಟಲು ನೋವು, ಚರ್ಮ ಕಾಯಿಲೆ, ಕಜ್ಜಿ ಕುರಗಳಿಂದ ಸ್ವಲ್ಪ ದೂರವಿರಬಹುದೆನ್ನುತ್ತಾರೆ. ಈ ಹೊಗೆಗೆ ಘಾಟು ಇಲ್ಲ. ಇದನ್ನು ಐದಾರು ವರ್ಷಗಳಿಂದ ಬಳಸಿಕೊಂಡು ಬಂದಿದ್ದೇವೆನ್ನುತ್ತಾರೆ.

ಕೂಚುಭಟ್ಟ

ತೋಟಗಾರಿಕೆಯಲ್ಲಿ ಸಾವಯವ ಕೃಷಿ

ಕರ್ನಾಟಕದ ಬೆಂಗಳೂರಿನ ಜೈವಿಕ ಕೇಂದ್ರ, ತೋಟಗಾರಿಕಾ ಇಲಾಖೆ, ಹುಳಿಮಾವು ಸಂಸ್ಥೆಯು ತೋಟಗಾರಿಕೆಯಲ್ಲಿ ಜೈವಿಕ ಕೃಷಿಯಲ್ಲಿ ತೊಡಗಿರುವ ರೈತರಿಗಾಗಿ ''ಸಾವಯವ ಕೃಷಿಯ ಒಂದು ಸಮಗ್ರ ನೋಟ'' ಎಂಬ ಪುಸ್ತಕವನ್ನು ಹೊರತಂದಿದೆ. ಜೈವಿಕ ಕೇಂದ್ರದ ಜಂಟಿ ನಿರ್ದೇಶಕರಾದ ಡಾ. ರಾಮಕೃಷ್ಣರವರು ಈ ಪುಸ್ತಕವನ್ನು ರಚಿಸಿದ್ದು ಓದುಗರಿಗೆ ಸರಳವಾಗಿ ಅರ್ಥವಾಗುವಂತೆ ಮೂಡಿ ಬಂದಿರುತ್ತದೆ. ಪ್ರಯೋಗಶೀಲರಾದ ಇವರು ಸಾವಯವ ಕೃಷಿಯಿಂದ ಪರಿಸರಕ್ಕಾಗುವ ಅನುಕೂಲಗಳೇನು, ಸಾವಯವ ದೃಡೀಕರಣ, ವಿವಿಧ ಸಾವಯವ ಪರಿಕರಗಳು ಮತ್ತು ಅವುಗಳ ಉತ್ಪಾದನಾ ವಿಧಾನಗಳಾವುವು, ಸಾವಯವ ಪದ್ಧತಿಯಲ್ಲಿ ಕೀಟ ಮತ್ತು ರೋಗ ನಿಯಂತ್ರಣಾ ಕ್ರಮಗಳಾವುವು, ತೋಟ ಗಾರಿಕೆ ಬೆಳೆಗಳಲ್ಲಿ ಸಾವಯವ ಕೃಷಿಯನ್ನು ಅಳವಡಿಸಲು ಸರ್ಕಾರದಿಂದ ದೊರೆಯುವ ಸೌಲತ್ತುಗ್ಗಳಾವುವು, ಸಾವಯವ ಕೃಷಿಯ ಮುಂದಿನ ಹೆಜ್ಜೆಗಳೇನು ಎಂಬುದರ ವಿವರವನ್ನು ನೀಡಿರುತ್ತಾರೆ. ಹೆಚ್ಚಿನ ವಿವರಗಳಿಗೆ :

ಡಾ. ಕೆ. ರಾಮಕೃಷ್ಣ, ಸಂಪಾದಕರು, ಮತ್ತು ಜಂಟಿ ನಿರ್ದೇಶಕರು,
ಜೈವಿಕ ಕೇಂದ್ರ, ತೋಟಗಾರಿಕೆ ಇಲಾಖೆ, ಹುಳಿಮಾವು, ಬೆಂಗಳೂರು.

ಕೃಷ್ಣಮೂರ್ತಿಯವರ ದೇಶೀಯ ಕಷಾಯ

ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕು ಇಡಗೋಡು ಗ್ರಾಮದ ಚಲ್ಲಾ ಕೃಷ್ಣಮೂರ್ತಿ ಸಾವಯವ ಕೃಷಿಕರು. ಇವರು ತೆಂಗಿನ ನುಸಿಗೆ ಮೂರು ತರಹದ ದೇಶೀಯ ಕಷಾಯವನ್ನು ಕಂಡುಕೊಂಡಿದ್ದಾರೆ. ಈ ದೇಶೀಯ ಪದ್ಧತಿಗಳಿಂದ ತೆಂಗಿನ ಮರಕ್ಕೆ ಬರುವ ರೋಗಗಳನ್ನು ಕಡಿಮೆ ಖರ್ಚಿನಲ್ಲಿ ಹತೋಟಿಯಲ್ಲಿಡಬಹುದೆಂದು ಸಾಧಿಸಿ ತೋರಿಸಿದ್ದಾರೆ.

ಇವರ ಕ್ರಮಗಳನ್ನು ಕೆಳಗೆ ಕೊಡಲಾಗಿದೆ.

1. ಬೇವಿನ ಕಷಾಯ

10ಕೆ.ಜಿ.ಬೇವಿನ ಬೀಜದ ಪುಡಿಯನ್ನು ಐದು ಲೀಟರ್ ನೀರಿನಲ್ಲಿ 48 ಗಂಟೆಗಳ ಕಾಲ ನೆನಸಿಟ್ಟು ಚೆನ್ನಾಗಿ ಕಲಸಿ ಕಷಾಯವನ್ನು ತಯಾರಿಸಿಕೊಳ್ಳಬೇಕು. ಈ ಕಷಾಯವನ್ನು 200 ಲೀಟರ್ ನೀರಿನೊಂದಿಗೆ ಬೆರೆಸಿ ಮರಕ್ಕೆ ಸಿಂಪಡಿಸುವುದರಿಂದ ನುಸಿ ರೋಗ ತಡೆಗಟ್ಟಬಹುದೆನ್ನುತ್ತಾರೆ.

2.ವಿಷಮದಾರಿ ಕಷಾಯ

10 ಕೆ.ಜಿ. ವಿಷಮದಾರಿ *(Clerodendron inermi)* ಸೊಪ್ಪನ್ನು ಚಿಕ್ಕದಾಗಿ ಕತ್ತರಿಸಿ 50ಲೀಟರ್ ನೀರಿನಲ್ಲಿ 48 ಗಂಟೆಗಳ ಕಾಲ ನೆನೆಸಿಟ್ಟು, ಈ ದ್ರಾವಣವನ್ನು 200 ಲೀಟರ್ ನೀರಿನೊಂದಿಗೆ ಬೆರೆಸಿ ಸಿಂಪಡಿಸಬೇಕೆನ್ನುತ್ತಾರೆ.

3. ಉಪ್ಪಿನ ಪ್ರಯೋಗ

ಇವರು ಐದು ಕೆ.ಜಿ. ಉಪ್ಪನ್ನು ಗೋಣಿಚೀಲದಲ್ಲಿ ಕಟ್ಟಿ ತೆಂಗಿನಮರದ ಸುಳಿಯಲ್ಲಿಡುವುದರಿಂದಲೂ ನುಸಿರೋಗವನ್ನು ತಡೆಗಟ್ಟಬಹುದು ಎನ್ನುತ್ತಾರೆ.

ಇದರ ಜೊತೆಗೆ ತೆಂಗಿನ ಗರಿ ಕೊರೆಯುವ ಹುಳವನ್ನು ಹಿಡಿದು ನಾಶಪಡಿಸಲು ಒಂದು ಅಗಲ ಬಾಣಲಿಯಲ್ಲಿ ಸೀಮೆಎಣ್ಣೆ ಮತ್ತು ನೀರಿನ ಮಿಶ್ರಣವನ್ನು ಹಾಕಿಕೊಳ್ಳುತ್ತಾರೆ. ರಾತ್ರಿಯ ವೇಳೆ ಈ ಬಾಣಲಿಯ ಹತ್ತಿರ ದೀಪವನ್ನು ಹಚ್ಚಿಟ್ಟರೆ ಈ ದೀಪಕ್ಕೆ ಆಕರ್ಷಿತವಾದ ಹುಳುಗಳು ಸೀಮೆಎಣ್ಣೆ ಮಿಶ್ರಿತ ನೀರಿನ ಪಾತ್ರೆಯಲ್ಲಿ ಬಿದ್ದು ನಾಶವಾಗುತ್ತವೆ. ಇದು ಸಹ ಒಂದು ಹುಳುಗಳ ಹತೋಟಿಯ ಕ್ರಮ.


ಇವರು ತಮ್ಮ ತೋಟದಲ್ಲಿ ತೆಂಗಿನ ಮರಗಳೊಂದಿಗೆ ಅಡಿಕೆ, ಬಾಳೆ, ಸಪೋಟ, ಮೂಸಂಬಿ, ಕರಿಮೆಣಸು, ಏಲಕ್ಕಿ, ಶುಂಠಿ, ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಈ ರೀತಿಯ ವೈವಿಧ್ಯ ಬೆಳೆ ಪದ್ಧತಿಯಿಂದ ತೆಂಗಿನ ಹಲವು ಕೀಟಗಳು ಹತೋಟಿಯಲ್ಲಿ ಇಡಬಹುದು ಎನ್ನುತ್ತಾರೆ.

ಹೆಚ್ಚಿನ ವಿವರಗಳಿಗಾಗಿ: ಚಲ್ಲಾ ಕೃಷ್ಣಮೂರ್ತಿ, ಚಲ್ಲಾ ಫಾರಂ, 3ನೇ ಕಿ.ಮೀ. ಇಡಗೂರು ರಸ್ತೆ, ಗೌರಿಬಿದನೂರು. ದೂರವಾಣಿ : 9448045572

ಮೂಲ: ವಿಜಯ ಕರ್ನಾಟಕ 03 ಮೇ 2006

ಹಂದಿ ಹಾವಳಿಗೆ ಬಾಟಲಿ ಬಾಣ!

ಜಮಖಂಡಿಯ ಕೃಷಿಕ ಸುರೇಶ್ ಪಾಟೀಲರು ತಮ್ಮ ಜಮೀನಿನಲ್ಲಿ ಹಂದಿಗಳ ಹಾವಳಿಯನ್ನು ತಡೆಯಲು ಸರಳ ಹಾಗೂ ಖರ್ಚಿಲ್ಲದ ತಂತ್ರವೊಂದನ್ನು ಕಂಡುಕೊಂಡಿದ್ದಾರೆ. ಗಿಡದ ಕೊಂಬೆಗೆ ಖಾಲಿ ಬಾಟಲಿಯನ್ನು ಮೇಲ್ಮುಖವಾಗಿ ನೇತು ಹಾಕಬೇಕು. ಬಾಟಲಿಯ ಮೇಲ್ಭಾಗದಿಂದಲೇ ಇನ್ನೊಂದು ದಪ್ಪವಾದ ದಾರವನ್ನು ಬಾಟಲಿಯಿಂದ ಅರ್ಧ ಅಡಿ ಕೆಳಗೆ ಬರುವಂತೆ ಇಳಿಬಿಟ್ಟು ಅದರ ಕೊನೆಗೆ ಒಂದು ದಪ್ಪ ರಟ್ಟನ್ನು ಕಟ್ಟಬೇಕು. ಬಾಟಲಿಯ ಪಕ್ಕದಿಂದ ಹಾಯ್ದು ಬರುವ ದಾರಕ್ಕೆ ಎರಡು ಕಬ್ಬಿಣದ ನಟ್‌ಗಳನ್ನು ಸ್ವಲ್ಪ ಅಂತರದಲ್ಲಿ ಕಟ್ಟಬೇಕು. ಬೀಸುವ ಗಾಳಿಗೆ ರಟ್ಟು ಆ ಕಡೆ ಈ ಕಡೆ ಹಾರಾಡುವುದರಿಂದ ಕಬ್ಬಿಣದ ನಟ್‌ಗಳು ಬಾಟಲಿಗೆ ತಾಗಿ ಟಣ್ ಟಣ್ ಎಂದು ನಿರಂತರವಾಗಿ ಶಬ್ದ ಮಾಡುತ್ತದೆ. ಈ ಶಬ್ದದಿಂದಾಗಿ ಹಂದಿಗಳು ಸಮೀಪ ಸುಳಿಯುವುದಿಲ್ಲ ಎನ್ನುತ್ತಾರೆ ಪಾಟೀಲರು. ಹತ್ತಿರದ ಬಾಳೆ ಕೃಷಿಕ ಮಹಾದೇವ ಇವರೂ ಸಹ ಈ ತಂತ್ರವನ್ನು ಅಳವಡಿಸಿಕೊಂಡಿದ್ದು ಬಾಳೆ ತೋಟವನ್ನು ಹಂದಿ ಕಾಟದಿಂದ ಮುಕ್ತಿ ಗೊಳಿಸಿಕೊಂಡಿದ್ದಾರೆ.



ಮೂಲ : ಸುಶೀಲಾ ಬಿ.ಪಾಟೀಲ ವಿಜಯ ಕರ್ನಾಟಕ 2, ಆಗಸ್ಟ್ 2006

(ವಿ. ಸೂ. ಈ ಅನುಶೋಧನೆ ಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮುಂದಿನ ಸ್ಪರ್ಧೆಗೆ ಕಳುಹಿಸಲಾಗುವುದು.)

ಸುಟ್ಟ ಗಾಯ ಹಾಗೂ ಕಲೆಗೆ ಔಷಧ

ಶಿವಮೊಗ್ಗ ಜಿಲ್ಲೆ ಶಿರಾಳ ಕೊಪ್ಪದ ರೇವಣ್ಣಮ್ಮನವರು ಸುಟ್ಟ ಗಾಯಕ್ಕೆ ತೇಗದ ಕುಡಿಯಿಂದ ಮದ್ದೊಂದನ್ನು ಕಂಡು ಕೊಂಡಿದ್ದಾರೆ. ತೆಂಗಿನ ಕಾಯಿ ಸುಟ್ಟ ಕರಕು, 10 ರಿಂದ 15 ಗ್ರಾಂ ನಷ್ಟು ತೇಗದ ಕುಡಿಯ ರಸ , 50 ಗ್ರಾಂ ಕೊಬ್ಬರಿ ಎಣ್ಣೆಗೆ ಮಿಶ್ರ ಮಾಡಿ ಸುಟ್ಟ ಗಾಯದ ಮೇಲೆ ಪ್ರತಿದಿನ ಲೇಪಿಸುತ್ತಿದ್ದರೆ ಗಾಯ ವಾಸಿಯಾಗುವುದು ಮಾತ್ರವಲ್ಲ ಕಲೆಯು ಕೂಡ ಇಲ್ಲದಂತಾಗುತ್ತದೆ ಎನ್ನುತ್ತಾರೆ ರೇವಣ್ಣಮ್ಮನವರು.

ನೈಸರ್ಗಿಕ ಶ್ಯಾಂಪೂ

ಸಾಗರ ತಾಲ್ಲೂಕು ಮಾವಿನಸರ ಗ್ರಾಮಸ್ಥರು ಸಾಂಪ್ರದಾಯಿಕವಾಗಿ ಸ್ಥಳೀಯವಾಗಿ ದೊರೆಯುವ ಹಾಡೇಬಳ್ಳಿ ಸೊಪ್ಪನ್ನು ನೈಸರ್ಗಿಕ ಶಾಂಪೂ ರೀತಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಹಾಡೇಬಳ್ಳಿ ಎಲೆಗಳಲ್ಲಿ ಕೂದಲಿಗೆ ಅಗತ್ಯವಾದ ಆರೈಕೆ ನೀಡುವ ಶಕ್ತಿ ಅಡಗಿದೆಯಂತೆ. ಈ ಹಾಡೇಬಳ್ಳಿಯ 10–12 ಎಲೆಗಳನ್ನು ನೀರಿನಲ್ಲಿ ಚೆನ್ನಾಗಿ ಹಿಸುಕಿ ತೆಗೆದಾಗ ದಪ್ಪ ಲೋಳೆಯಾದ ದ್ರವ ಸಿಗುತ್ತದೆ. ಇದನ್ನು ಗುಳ ಎನ್ನುತ್ತಾರೆ.ಅರ್ಧ ತಾಸು ಹಾಗೆ ಇಟ್ಟರೆ ಇದು ಇನ್ನೂ ಮಂದವಾಗುತ್ತದೆ. ಇದನ್ನು ವಾರಕ್ಕೆ ಎರಡು ಬಾರಿ ತಲೆಗೆ ಹಾಕಿಕೊಳ್ಳುವುದು. ಇದರಿಂದ ಕೂದಲು ಉದುರುವುದು ಮತ್ತು ತಲೆಹೊಟ್ಟು ಕಡಿಮೆಯಾಗುವುದು ಮಾತ್ರವಲ್ಲ ಕೂದಲು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಕನಿಷ್ಠ ಆರು ತಿಂಗಳು ಬಳಸಬೇಕು. ಈಗಿನ ಕಾಲದಲ್ಲಿ ದೊರೆಯುವ ರಾಸಾಯನಿಕಯುಕ್ತ ಶಾಂಪುಗಳು ಕೂದಲನ್ನು ಹಾಳು ಮಾಡುತ್ತಿದ್ದು, ಇದನ್ನು ಬಳಸುವ ಬದಲು ಈ ಸೊಪ್ಪಿನ ಸದ್ಬಳಕೆ ಮಾಡುವುದು ಒಳಿತು. ಈ ಬಗ್ಗೆ ಹೆಚ್ಚಿನ ವಿವರಕ್ಕೆ ಸೌಖ್ಯ ಮೋಹನ್ ದೂರವಾಣಿ ಸಂಖ್ಯೆ 9986223568 ರವರನ್ನು ಸಂಪರ್ಕಿಸಬಹುದು.

ಮೂಲ: ಪ್ರಜಾವಾಣಿ 24 ಆಗಸ್ಟ್ 2006

ತಲೆಯ ಬಿಳಿ ಕೂದಲು ಕಪ್ಪಾಗಲು ಚಿಕಿತ್ಸೆ

ಬೆಂಗಳೂರು ನಗರ ಚಿಕ್ಕ ಬೊಮ್ಮಸಂದ್ರದ ಗೋಪಾಲ್ ಎಂಬುವರು ತಲೆಯ ಬಿಳಿಕೂದಲನ್ನು ಕಪ್ಪು ಕೂದಲನ್ನಾಗಿಸಲು ಒಂದು ನಾಟಿ ಔಷದಿಯನ್ನು ತಿಳಿಸಿದ್ದಾರೆ. ಬಾಳೆಯದಿಂಡು/ಕಂದನ್ನು ತೆಗೆದುಕೊಂಡು ಮೇಲಿನ ಪದರಗಳನ್ನು ಕಳಚುತ್ತಾ ಹೋದಾಗ ಕೊನೆಯಲ್ಲಿ(ಮಧ್ಯದಲ್ಲಿ) ಉಳಿಯುವುದು ಬಿಳಿಯ ಭಾಗ. ಅದನ್ನು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಕತ್ತರಿಸಿ ಕೊಬ್ಬರಿ ಎಣ್ಣೆಯೊಂದಿಗೆ ಬೆರೆಸಿ 3–4 ದಿನಗಳ ಕಾಲ ಹಾಗೇ ಬಿಡಬೇಕು. ನಂತರ ಪ್ರತಿ ದಿನ ಆ ಎಣ್ಣೆಯನ್ನು ತಲೆಕೂದಲಿಗೆ ಹಚ್ಚುತ್ತಾ ಇದ್ದರೆ ಬಿಳಿಕೂದಲು ಕಪ್ಪನೆ ಬಣ್ಣಕ್ಕೆ ತಿರುಗುತ್ತದೆಯೆಂತೆ .

ನೆಲ್ಲಿಕಾಯಿ ಔಷಧಿಗಳು

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಮಾವಿನಸರ ಗ್ರಾಮದ ಎಡಜಿಗಳಮನೆ ಎಂ.ಕೆ. ರಾಘವೇಂದ್ರ ಎಂಬುವರು ನೆಲ್ಲಿಕಾಯಿಯಿಂದ ಕಷಾಯ, ಲೇಹ್ಯ ಹಾಗೂ ಉಪ್ಪು ನೆಲ್ಲಿ ಮುಂತಾದ ಪದಾರ್ಥಗಳನ್ನು ತಯಾರಿಸುತ್ತಿದ್ದಾರೆ. ಅವುಗಳನ್ನು ಆಯುರ್ವೇದದ ಔಷಧಿಯಂತೆ ಬಳಸುತ್ತಿದ್ದಾರೆ. ಅವುಗಳ ಉಪಯೋಗಗಳನ್ನು ಹಿತ್ತಲಗಿಡದೊಂದಿಗೆ ಹಂಚಿಕೊಂಡಿರುತ್ತಾರೆ.

ನೆಲ್ಲಿಕಾಯಿಯ ಕಷಾಯವು ನೆಗಡಿ, ಕೆಮ್ಮು, ಅಜೀರ್ಣ, ನಿದ್ರಾಹೀನತೆಯನ್ನು ದೂರಮಾಡುತ್ತದೆಯಂತೆ. ನೆಲ್ಲಿಕಾಯಿಯ ಲೇಹ್ಯವನ್ನು ಮೇಲಿನ ತೊಂದರೆಗಳಿಗೆ ಬಳಸಬಹುದು ಹಾಗೆ ಉಪ್ಪು ನೆಲ್ಲಿಯು ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸಿ ಚುರುಕುತನಕ್ಕೆ ಉತ್ತಮವಾದದೆಂದು ರಾಘವೇಂದ್ರರವರು ಹೇಳುತ್ತಾರೆ.

ರುದ್ರಪ್ಪಶೆಟ್ಟರ ನಾಟಿ ವೈದ್ಯಪದ್ಧತಿಗಳು

ಹಾಸನ ಜಿಲ್ಲೆ ಬೇಲೂರು ತಾಲೂಕು ಹಳೇಬೀಡು ಹೋಬಳಿಯ ಮಲ್ಲಿಕಾರ್ಜುನಪುರದ ರುದ್ರಪ್ಪನವರು ಮೂಲತಃ ರೈತರು. ಇವರು ವಂಶ ಪರಂಪರೆಯಾಗಿ ನಾಟಿ ವೈದ್ಯ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿರುತ್ತಾರೆ.ಇವರ ಕೆಲವು ಔಷಧಿಗಳನ್ನು ಕೆಳಗೆ ಕೊಡಲಾಗಿದೆ.

1) ಮಕ್ಕಳಲ್ಲಿ ಬಾಲಗ್ರಹಕ್ಕೆ (ಲಕ್ಷಣ : ಮಿಡುಕುವುದು, ಬಾಯಿಯಲ್ಲಿ ಜೊಲ್ಲು ಸುರಿಸುವುದು) ಬಲುಕುಣಿಕೆ, ಮುಳ್ಳಿಲ್ಲದ ಹಾಲವಾಣದ ಎಲೆ , ಉತ್ತರಾಣಿ ಎಲೆ , ಇವುಗಳೆಲ್ಲವುಗಳನ್ನು ಒಂದೊಂದು ತೆಗೆದುಕೊಂಡು ಜಜ್ಜಿ ರಸ ತೆಗೆದು ಇದರ ನಾಲ್ಕು ಹನಿಯಷ್ಟು ರಸವನ್ನು 25 ಗ್ರಾಂ ನಾಟಿ ಹಸುವಿನ ಹಾಲಿನಲ್ಲಿ ಬೆರಸಿ ಅದಕ್ಕೆ ಎರಡು ಹನಿ ಗೇರುಬೀಜದ ಎಣ್ಣೆಯನ್ನು ಸೇರಿಸಿ ಕುಡಿಸಿದರೆ ವಾಸಿಯಾಗುತ್ತದೆಯೆಂತೆ.
2) ಮಕ್ಕಳಲ್ಲಿ ಹಳ್ಳೆ ಕಾಯಿಲೆಗೆ ಬಲುಕುಣಿಕೆ ಎಲೆಯ ರಸ, ಗೇರು ಬೀಜದ ಎಣ್ಣೆ ಎರಡು ಹನಿ, ಗೋಲಿ ಗಾತ್ರದ ನಾಟಿ ಹತ್ತಿ ಸುಟ್ಟ ಬೂದಿ, ನಾಟಿ ಹಸುವಿನ 25 ಗ್ರಾಂ ಹಸಿ ಹಾಲಿನಲ್ಲಿ ಮಿಶ್ರಗೊಳಿಸಿ ಕುಡಿಸಿದರೆ ಒಂದು ದಿನದಲ್ಲಿ ವಾಸಿಯಾಗುತ್ತದೆನ್ನುತ್ತಾರೆ.
3) ಕೂದಲು ತಿನ್ನುವ ಚೌರದ ಹುಳಕ್ಕೆ ಮುತ್ತಗದ ಬೀಜ ನೀರಿನಲ್ಲಿ ಸವೆದು ರಸವನ್ನು ಹುಳು ತಿಂದ ಭಾಗಕ್ಕೆ ನಾಲ್ಕೈದು ದಿನ ಹಚ್ಚಿದರೆ ಪುನಃ ಕೂದಲು ಹುಟ್ಟುತ್ತದೆನ್ನುತ್ತಾರೆ.
4) ಕುರಕ್ಕೆ: ಚೌಳು ಮಣ್ಣು , ನಿಂಬೆ ಹಣ್ಣಿನ ರಸ, ಒಂದು ಇಕ್ಕಲು ಬೆಳ್ಳುಳ್ಳಿ, ಎರಡು ಮೆಣಸನ್ನು ಸಣ್ಣಗೆ ಅರೆದು ಕುರದ ಸುತ್ತಲೂ ಹಚ್ಚಿದರೆ ಕಲ್ಲಾಗಿರುವ ಕುರ ಮಳಕೆ ಸಮೇತ ಒಂದು ದಿನದಲ್ಲಿ ಬಿದ್ದು ಹೋಗುತ್ತದೆ. ಇದರ ಗಾಯ ಮಾಯಲು ಕಗ್ಗರಲೆ ಸೊಪ್ಪು ನಾಲ್ಕು ಎಲೆ, ನಿಂಬೆ ಹಣ್ಣಿನ ರಸ, ಬೆಳ್ಳುಳ್ಳಿ ಒಂದಿಕ್ಕಲು, ಮೆಣಸು ಒಂದು, ಸಣ್ಣಗೆ ಅರೆದು ಹಚ್ಚಿದರೆ ಗಾಯ ವಾಸಿಯಾಗುತ್ತದೆ.
5) ಇಸುಬು: ನೀರಿಸುಬು ಅಥವಾ ಬರ ಇಸುಬು ಇದ್ದರೆ ಇದನ್ನು ನಿವಾರಿಸಿಕೊಳ್ಳಲು ಬೆಟ್ಟ ಕಣಗಲು ಅಥವಾ ದೀಪಕಣಗಲ ಹಾಲು 25 ಗ್ರಾಂ, ಪಚ್ಚ ಕರ್ಪೂರ 10ಗ್ರಾಂ, ಪೆಟ್ಲುಪ್ಪು 5ಗ್ರಾಂ, ನಾಟಿ ಹಸುವಿನ ಬೆಣ್ಣೆ 50 ಗ್ರಾಂ, ಇಷ್ಟನ್ನು ತಾಮ್ರದ ಪಾತ್ರೆಯಲ್ಲಿ ಸ್ವಲ್ಪ ಬಿಸಿ ಮಾಡಿಟ್ಟುಕೊಂಡಿದ್ದು ಪ್ರತಿ ದಿನ ಹಚ್ಚುತ್ತಿದ್ದರೆ ಇಸುಬು ಎಂಟು ದಿನಗಳಲ್ಲಿ ವಾಸಿಯಾಗುತ್ತದೆ. (ಈ ಸಮಯದಲ್ಲಿ ಶಲ್ದಿ ಪದಾರ್ಥ ತಿನ್ನಬಾರದು)
6) ಹುಳುಕಡ್ಡಿಗೆ : ಎಕ್ಕದ ಹಾಲು ಒಂದು ಹನಿ, ಅಷ್ಟೇ ಗಾತ್ರದ ಅರಿಶಿನ ಮಿಶ್ರಗೊಳಿಸಿ ಹುಳುಕಡ್ಡಿಯ ಸುತ್ತಲೂ ಮೂರು ನಾಲ್ಕು ದಿನ ಹಚ್ಚಿದರೆ ವಾಸಿಯಾಗುತ್ತದೆ ಎನ್ನುತ್ತಾರೆ.
7) ಹಳೇಗಾಯಕ್ಕೆ : ಮುಲ್ಬಿಗನ ಬಳ್ಳಿಯ *(Purgularia daemia)* ಎಲೆ ಕಿತ್ತಾಗ ಬರುವ ಹಾಲನ್ನು ಗಾಯದ ಸುತ್ತ ಹಚ್ಚುವುದರಿಂದ ಐದಾರು ದಿನದಲ್ಲಿ ಹಳೆಯ ಗಾಯ ವಾಸಿಯಾಗುತ್ತದೆನ್ನುತ್ತಾರೆ.

ಸಂಗ್ರಹ : ಸಿದ್ದಾರಾಜು ತರುಕರುಹಳ್ಳಿ

ಹೊಟ್ಟೆ ನೋವು ಪರಿಹಾರಕ್ಕೆ ಉಪ್ಪು

ಒರಿಸ್ಸಾ ರಾಜ್ಯದ ಪೈಕಾಸಾಯಿ ಗ್ರಾಮದ ಶರತ್ ಚಂದ್ರ ಪ್ರಧಾನ್ ಎಂಬುವರು ಹೊಟ್ಟೆ ನೋವಿಗೆ ಒಂದು ಲೀಟರ್ ನೀರಿನಲ್ಲಿ ಐದು ಗ್ರಾಂ ಉಪ್ಪನ್ನು ಹಾಕಿ, ಆಗತಾನೆ ಕತ್ತರಿಸಿದ ಪಪ್ಪಾಯಿ ಗಿಡದ ಎಲೆಯ ತೊಟ್ಟಿನ ರಂಧ್ರದ ಮೂಲಕ ಕುಡಿಸುತ್ತಾರೆ. ಇದರಿಂದ ಹೊಟ್ಟೆ ನೋವನ್ನು ತಡೆಗಟ್ಟಬಹುದು ಎನ್ನುತ್ತಾರೆ.

ಮೂಲ : ಹನಿ ಬೀ 17(1) (2) ಜನವರಿ–ಜೂನ್ 2006, ಪುಟ –40

ಶೀತ ನಿವಾರಣೆಗೆ ಉಪ್ಪು ಮತ್ತು ತುಪ್ಪ

ಒರಿಸ್ಸಾ ರಾಜ್ಯದ ಅಂಗೂಲ ಜಿಲ್ಲೆಯ ರಾಜೇಂದ್ರ ನಾರಾಯಣ್ ಬಿಸ್ವಾಲ್ ರವರ ಪ್ರಕಾರ 200 ರಿಂದ 250 ಗ್ರಾಂ ವರೆಗೆ ಅಡಿಗೆ ಉಪ್ಪು ಮತ್ತು ಆಕಳ ತುಪ್ಪ ಇವೆರಡನ್ನು ಬಿಸಿ ಮಾಡಿ ನಂತರ ಒಂದು ಬಟ್ಟೆಯ ಮೇಲೆ ಸುರಿದು, ಸ್ವಲ್ಪ ಬಿಸಿ ಇರುವ ಮಟ್ಟಿಗೆ ಈ ಬಟ್ಟೆಯನ್ನು ಶೀತವಾಗಿರುವ ವ್ಯಕ್ತಿಯ ಎದೆ ಭಾಗದ ಮೇಲೆ ಇಡಬೇಕು. ಹೀಗೆ ಮಾಡುವುದರಿಂದ ಕೆಮ್ಮು, ಮತ್ತು ಶೀತದಿಂದ ಗುಣಮುಖವಾಗಬಹುದು ಎನ್ನುತ್ತಾರೆ.

ಅಸ್ತಮಾ ಕಾಯಿಲೆ ನಿವಾರಣೆ

ಒರಿಸ್ಸಾ ರಾಜ್ಯದ ನಯಾಪಲ್ಲಿ ಜಿಲ್ಲೆಯ ಕಾಂಚನ್ ರವಿ ಕುಮಾರ್‌ರವರು ಅಸ್ತಮಾ ಕಾಯಿಲೆಗೆ ಒಂದು ಪರಿಹಾರ ಕಂಡುಹಿಡಿದಿರುವರು. ಇವರ ಪ್ರಕಾರ 50 ಗ್ರಾಂ ಗರಿಕೆಹುಲ್ಲು ಮತ್ತು ತುಳಸಿ ಎಲೆಗಳನ್ನು ಚೆನ್ನಾಗಿ ಅರೆದು ನಂತರ ಇವರೆಡರ ಮಿಶ್ರಣವನ್ನು 100 ಗ್ರಾಂ ನೀರು, ಒಂದು ಚಮಚ ದಾಲ್ಚಿನ್ನಿ ಮತ್ತು ಮೆಣಸಿನೊಂದಿಗೆ ಕುದಿಸಬೇಕು. ನಂತರ ಶೋಧಿಸಿ ಈ ರಸವನ್ನು ಬರಿಹೊಟ್ಟೆಯಲ್ಲಿ ಮೂರು ದಿವಸಗಳವರೆಗೆ ತೆಗೆದುಕೊಂಡರೆ ಅಸ್ತಮಾ ಕಾಯಿಲೆಯಿಂದ ದೂರವಿರಬಹುದು ಎನ್ನಲಾಗಿದೆ.

ಮೂಲ : ಹನೀ ಬೀ 17 (1)(2) ಜನವರಿ–ಜೂನ್ 2006, ಪುಟ –40

ಮಧುಮೇಹಕ್ಕೆ ಔಷಧಿ

ಸೀಗೆ ಪುಡಿಯನ್ನು ಸ್ನಾನಕ್ಕೆ–ಪಾತ್ರ ಶುಚಿಗೆ, ನಂಜು ಆದಾಗ ಪಟ್ಟು ಕಟ್ಟಲು ಬಳಸುತ್ತಾರೆ. ಇದರಿಂದ ದೇಹದ ಹೊರ ಭಾಗದ ಶುದ್ಧಿ ಎಲ್ಲರಿಗೂ ತಿಳಿದ ವಿಷಯ. ಹೀಗೆ ದೇಹದ ಒಳಗೆ ಸೇರಿರುವ ರೋಗಾಣುಗಳನ್ನು ನಾಶಪಡಿಸಬಹುದೇ ಎಂಬ ವಿಷಯ ಮನಸ್ಸಿಗೆ ಬಂದಿದ್ದೇ ತಡ ಕಾರ್ಯಗತರಾಗಿಯೇ ಬಿಟ್ಟರು. ಸಾಗರ ತಾಲೂಕು ಮಾವಿನಸರದ ಎಂ.ಜಿ. ಸತ್ಯನಾರಾಯಣರಾವ್. ಇವರ ಪ್ರಾಯ 55 ರಿಂದ 60 ಇರಬಹುದು. ಮಧುಮೇಹ ದಿಂದ ಬಳಲುತ್ತಿರುವರಿವರು. ಈಗ ಎರಡು ತಿಂಗಳಿನಿಂದ ದಿನಾ ಸಂಜೆ ಲೋಟಕ್ಕೆ ಒಂದು ಚಮಚ ಸೀಗೆ ಪುಡಿ, ನಾಲ್ಕು ಚಮಚ ನೀರು ಹಾಕಿ ಕದಡಿ ಇಟ್ಟು ,ಬೆಳಿಗ್ಗೆ ಎದ್ದ ತಕ್ಷಣ ಇದನ್ನು ಸೋಸಿ ನೀರನ್ನು ಹಸಿದ ಹೊಟ್ಟೆಗೆ ಕುಡಿಯುತ್ತಿದ್ದಾರೆ. ತಮ್ಮನ್ನೆ ಪ್ರಯೋಗಕ್ಕೆ ಒಡ್ಡಿ ಕೊಂಡಿದ್ದಾರೆ. ಮಧುಮೇಹಕ್ಕೆ ಬೇರೆ ಯಾವ ಔಷಧಿಯನ್ನು ಬಳಸುತ್ತಿಲ್ಲ, ಈಗ ಚೆಕ್ ಮಾಡಿಸಿದಾಗ ನಾರ್ಮಲ್ ಬಂದಿದೆ, ಮಹತ್ತರ ಬದಲಾವಣೆ ಆಗಿದೆ. ಬೇರೆಯವರಿಗೆ ಹೇಳಲು ಅಂಜಿಕೆ. ಸಂಶೋಧಕರಿಂದ ಇದರ ಬಗ್ಗೆ ತಿಳಿಯ ಬಯಸುತ್ತೇನೆನ್ನುವರು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಲಲಿತಾ ಜಿ. ಭಟ್ ಜಿಗಳೆಮನೆ, ಯಡಜಿಗಳೆ ಮನೆ ಅಂಚೆ –577401
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ , ದೂರವಾಣಿ –08183–296251

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿ ಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

– *ಸಂಪಾದಕ*

ನೆಲ್ಲಿ ತಳಿ

ವರ್ಷ ಪೂರ್ತಿ ಫಸಲು ನೀಡುವ ನೆಲ್ಲಿ ತಳಿಯ ಸಂರಕ್ಷಣೆಯನ್ನು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಮಾವಿನಸರ ಗ್ರಾಮದ ಎಡ ಜಿಗಳೇ ಮನೆ ಎಂ.ಕೆ. ರಾಘವೇಂದ್ರರು. ನಡೆಸುತ್ತಿರುವರು ಇವರ ಭೂಮಿಯಲ್ಲಿ ಇಪ್ಪ ತ್ತರಿಂದ ಮೂವತ್ತು ನೆಲ್ಲಿ ಗಿಡಗಳು ಬೆಳೆದುಕೊಂಡಿದ್ದು, ಅವು ತಮ್ಮ ವಿಶೇಷ ಗುಣದಿಂದ ಹಲವಾರು ರೈತರ ಗಮನ ಸೆಳೆದಿರುತ್ತವೆ. ಕಾರಣವೆನೆಂದರೆ ಅವುಗಳಲ್ಲಿ ಹನ್ನೊಂದು ಗಿಡಗಳು ಫಸಲು ನೀಡುತ್ತಿದ್ದು ವರ್ಷ ಪೂರ್ತಿ ಹೂವು–ಕಾಯಿ ಇದ್ದೇ ಇರುತ್ತದೆ. ಗಿಡದಲ್ಲಿ ಕಾಯಿ ಇರುವಂತೆಯೆ ಹೂವು ಬರುತ್ತದೆ. ಆದರಲ್ಲೂ ಅಕ್ಟೋಬರ್‌ನಲ್ಲಿ ಬರುವ ಫಸಲಿನ ಇಳುವರಿ ಅಧಿಕವಾಗಿರುತ್ತದೆ. ಇದೊಂದೇ ವಿಶೇಷವಲ್ಲ ಹನ್ನೊಂದು ಗಿಡಗಳ ಕಾಯಿಗಳು ರುಚಿ, ಗಾತ್ರ, ಹಾಗು ಬಣ್ಣ, ಆಕಾರ ಗಳಲ್ಲಿ ಬೇರೆ ಬೇರೆಯಾಗಿರುತ್ತವೆ.ಕೆಲವು ಹಸಿರುಕಾಯಿ, ಸಣ್ಣಗಾತ್ರ. ಒಂದು ಗಿಡದಲ್ಲಿ ಕಾಯಿ ಚಿಕ್ಕದಿರುವಾಗ ಕೆಂಪಾಗಿರುತ್ತದೆ. ಬಲಿಯುತ್ತಾ ಬಣ್ಣ ಬದಲಾಗುತ್ತದೆ. ಇನ್ನೊಂದರಲ್ಲಿನ ಕಾಯಿಗಳ ಮೇಲೆ ಚಿಕ್ಕಿಗಳಿವೆ. ರುಚಿಯಲ್ಲಿ ಒಂದು ಮರದ್ದು ಚೊಗರು, ಇನೊಂದು ಸಿಹಿಯಾಗಿರುತ್ತದೆ. ಈ ವೈವಿದ್ಯತೆಗೆ ಕಾರಣವೇನೆಂಬುದು ಸರಿಯಾಗಿ ಅವರಿಗೆ ತಿಳಿದಿಲ್ಲ, ಆದರೂ ಅವರು ಈ ಗಿಡಗಳನ್ನು ಸಂರಕ್ಷಿಸಿದ್ದಾರೆ. ಈ ವೈವಿದ್ಯತೆಗೆ ಮಣ್ಣಿನ ಗುಣವು ಕಾರಣವೋ ಅಥವಾ ತಳಿಯು ಕಾರಣವೋ ಎಂದು ತಿಳಿಯುವ ತವಕ ರಾಘವೇಂದ್ರ ರವರಿಗಿದೆ.

ಇನ್ನೊಂದು ಮುಖ್ಯ ವಿಚಾರವೆಂದರೆ, ಇವರು ಈ ಫಸಲನ್ನು ಮಾರಾಟ ಮಾಡಲು ಸರಿಯಾದ ಮಾರುಕಟ್ಟೆ ಬೆಲೆ ತಿಳಿಯದೇ, ತಾವೇ ಅವುಗಳ ಪರ್ಯಾಯ ಉಪಯೋಗವನ್ನು ಕಂಡುಕೊಂಡಿದ್ದಾರೆ. ನೆಲ್ಲಿ ಕಾಯಿ ಕಷಾಯ ಲೇಹ್ಯ, ಉಪ್ಪು ನೆಲ್ಲಿ, ಮಾಡಿ ಮಾರಾಟ ಮಾಡುವ ಯೋಜನೆಯನ್ನು ಕೂಡ ಪ್ರಾರಂಭಿಸಿದ್ದಾರೆ.

ಮೂಲ: ಪ್ರಜಾವಾಣಿ 09 ಮಾರ್ಚ 2005

ಶ್ರೀ ಅಣ್ಣೇಗೌಡರಿಗೆ ಶ್ರದ್ಧಾಂಜಲಿ

ಬೇಲೂರಿನ ನಮ್ಮ ಪ್ರಗತಿಪರ ರೈತರಾದ ಶ್ರೀಯುತ ಅಣ್ಣೇಗೌಡ ಇವರು 15, ಏಪ್ರಿಲ್ 2006 ರಂದು ದೈವಾಧೀನರಾಗಿರುತ್ತಾರೆ. ಇವರು ಹೆಂಡತಿ, ಒಬ್ಬ ಮಗ ಹಾಗೂ ಒಬ್ಬ ಮಗಳನ್ನು ಬಿಟ್ಟು ಆಗಲಿದ್ದಾರೆ. ಇವರಿಗೆ 51 ವರ್ಷ ವಯಸ್ಸಾಗಿತ್ತು.

ರೈತರಾದ ಶ್ರೀಯುತ ಅಣ್ಣೇಗೌಡರು ಸುಮಾರು 20 ವರ್ಷ ಗಳಿಂದ ರೇಷ್ಮೆ ಕೃಷಿಯಲ್ಲಿ ಏಳು ಬೀಳುಗಳನ್ನು ಅನುಭವಿಸುತ್ತಾ ಬಂದವರು. ಐದಾರು ವರ್ಷಗಳ ಹಿಂದೆ ರೇಷ್ಮೆ ಸಾಕಾಣೆಯಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಂಡರು. ಹಿಪ್ಪು ನೇರಳೆ ಕಡ್ಡಿ ಯಿಂದ ಚಂದ್ರಿಕೆಯನ್ನು ಮಹಿಳೆಯರೇ ತಯಾರಿಸಿಕೊಳ್ಳಬಹುದಾದ್ದನ್ನು ಸಂಶೋಧಿಸಿದ್ದರು. ಈ ಸಂಶೋಧನೆ ಅತಿ ಸರಳ ಮತ್ತು ಪರಿಸರ ಪ್ರೇಮಿಯಾಗಿತ್ತು. ಇದನ್ನು ಗುರುತಿಸಿದ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನವು ನಾಲ್ಕನೇ ಸ್ಪರ್ಧೆಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಹಾಗೂ ಪುರಸ್ಕಾರವನ್ನು ಕೊಡಲು ಗುರುತಿಸಿರುತ್ತದೆ. ಹಿತ್ತಲ ಗಿಡದ ಬಳಗ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸುತ್ತದೆ.

ಕೃಷಿಯಲ್ಲಿನ ವಿಶೇಷ ಸಾಧನೆಗಾಗಿ ಡಾಕ್ಟರೇಟ್ ಮತ್ತು ಕೃಷಿ ಪಂಡಿತ ಪ್ರಶಸ್ತಿ ಪಡೆದ ರೈತರು

ಬಾಗಲಕೋಟೆ ಜಿಲ್ಲೆ ಹುನುಗುಂದದ ಮಲ್ಲಣ್ಣ ನಾಗರಾಳ ಹಾಗೂ ಉತ್ತರ ಕನ್ನಡ ಜಿಲ್ಲೆ ಬನವಾಸಿಯ ಅಬ್ದುಲ್ ರವೂಫ್ ಶೇಖ್ ಎಂಬ ಇಬ್ಬರು ರೈತರು ಕೃಷಿಯಲ್ಲಿ ಸಾಧಿಸಿದ ವಿಶೇಷ ಸಾಧನೆಗಾಗಿ ಧಾರವಾಡ ಕೃಷಿ ವಿಶ್ವ ವಿದ್ಯಾಲಯ ನೀಡುವ ಗೌರವ ಡಾಕ್ಟರೇಟ್ ಪ್ರಶಸ್ತಿ (2005–2006) ಪುರಸ್ಕೃತರಾಗಿದ್ದಾರೆ.

✠ ಹುನುಗುಂದದ ರೈತ ಮಲ್ಲಣ್ಣ ನಾಗರಾಳ ತಮ್ಮ ಹೊಲದಲ್ಲಿ ಮಳೆ ನೀರು ಇಂಗಿಸಿ ಅಂತರ್ಜಲ ಹೆಚ್ಚಿಸಿಕೊಂಡಿದ್ದಾರೆ. ನಾಗರಾಳ ಕುಟುಂಬ ದವರು ತಮ್ಮ ಹೊಲವನ್ನು ಕೆರೆಯ ಅಂಗಳದಂತೆ ಸಮತಟ್ಟಗೊಳಿಸುವು ದಲ್ಲದೆ, ಸುತ್ತಲೂ ಎತ್ತರದಲ್ಲಿ ಒಡ್ಡು ನಿರ್ಮಿಸಿ ಮಳೆ ನೀರು ನಿಗದಿತ ಪ್ರಮಾಣದವರೆಗೆ ಹೊರ ಹರಿಯದಂತೆ ಕೃಷಿ ಭೂಮಿಯಲ್ಲಿಯೇ ಇಂಗಿ ಸುವ ಪದ್ಧತಿಯನ್ನು ತಮಗೆ ಸೇರಿದ 32 ಎಕರೆ ಭೂಮಿಯಲ್ಲಿ ಅನುಸರಿ ಸುತ್ತಿದ್ದಾರೆ. ಜೊತೆಗೆ ಇವರ ಮಳೆಯಿಂದ ಬಿದ್ದ ಹೆಚ್ಚುವರಿ ನೀರು ಹೊರ ಹೋಗಲು ಕಾಲುವೆಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿರ್ಮಿಸಿದ್ದಾರೆ. ಮಲ್ಲಣ್ಣ ನಾಗರಾಳ ಅವರ ಅಜ್ಜ ಸಂಗನ ಬಸಪ್ಪ ನಾಗರಾಳ ರವರು 'ರಬಿ' ಜೋಳದ ಉತ್ತಮ ಬೆಳೆಗಾಗಿ ಮತ್ತು ಹೊಲದಲ್ಲಿ ಉತ್ತಮ ಒಡ್ಡು ನಿರ್ಮಾಣೆಗಾಗಿ 1939ರಲ್ಲಿ ಬ್ರಿಟಿಷ್ ಸರ್ಕಾರದಿಂದ ಪ್ರಶಸ್ತಿ ಪಡೆದು ಕೊಂಡಿದ್ದಾರೆ.

✠ ಬನವಾಸಿಯ ಅಬ್ದಲ್ ರವೂಫ್ ಶೇಖ್ ರವರು ಕಲಿತದ್ದು 9ನೇ ತರಗತಿಯವರಿಗೆ ಮಾತ್ರ. 1960ರ ದಶಕದ ನಂತರ ತಮ್ಮ 13 ಎಕರೆ ಭೂಮಿಯಲ್ಲಿ ಕೃಷಿಯನ್ನು ಪ್ರಾರಂಭಿಸಿದರು. ತಮ್ಮ ಸತತ ಪ್ರಯತ್ನ ಸಾಧನೆ ಯಿಂದ 350 ಕ್ಕೂ ಹೆಚ್ಚು ಎಕರೆ ಭೂಮಿಯಲ್ಲಿ ಅನಾನಸ್, ಅಡಿಕೆ, ತೆಂಗು, ವೆನಿಲ್ಲಾ, ಕಾಳುಮೆಣಸು, ಬಾಳೆ, ರಾಗಿ, ಭತ್ತ, ಮುಂತಾದ ಎಲ್ಲಾ ಬೆಳೆಗಳನ್ನು ಸಾವಯವ ಮತ್ತು ರಸ ನೀರಾವರಿ ಪದ್ಧತಿ ಬಳಸಿ ಬೆಳೆ ಯುತ್ತಿದ್ದಾರೆ. ಹೀಗೆ ಇವರು ತಮ್ಮ ಕೃಷಿ ಕ್ಷೇತ್ರವನ್ನು ನಿರಂತರವಾಗಿ ಪ್ರಯೋಗ ಶಾಲೆಯಂತೆ ಮಾಡಿಕೊಂಡಿದ್ದಾರೆ. ಇವರ ಕೃಷಿಯಲ್ಲಿನ 40 ವರ್ಷದ ನಿರಂತರ ಸಾಧನೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಶ್ರೀ ಸೊಂದಾಸ್ವರ್ಣ ವಲ್ಲಿ ಮಠವು 'ಸಮಾಜ ಜೀವಿ'ಯೆಂದು, ಚಿತ್ರದುರ್ಗದ ಮುರಘರಾಜೇಂದ್ರ ಮಠವು 1999 ರಲ್ಲಿ 'ಕಾಯಕ ರತ್ನ' ವೆಂದು, 2002ರಲ್ಲಿ ಎಂ.ಎಚ್. ಮರಿಗೌಡ ಪ್ರಶಸ್ತಿ ಒಣಬೇಸಾಯದ ಯಶಸ್ವಿ ರೈತ ಪ್ರಶಸ್ತಿಗಳು ಮುಖ್ಯ ವಾದವು. ಶೇಖ್ ಅವರ ಮುಡಿಗೆ ಇದೀಗ ಗೌರವ ಡಾಕ್ಟರೇಟ್ ಪ್ರಶಸ್ತಿಯು ಸೇರಿಕೊಂಡಿದೆ.

✠ ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲೂಕು ಕುಕ್ಕುಜಡ್ಕದ ಪೈಲೂರು ಶ್ರೀನಿವಾಸ ರಾಯರು ರಾಜ್ಯಸರ್ಕಾರದ ''ಕೃಷಿ ಪಂಡಿತ'' ಪ್ರಶಸ್ತಿ ಪುರಸ್ಕೃತರು. ರಾಯರು ಮಣ್ಣಿಗೆ ಮತ್ತು ಪರಿಸರಕ್ಕೆ ಹೊಂದಿಕೊಂಡ ತತ್ವ ಸಿದ್ಧಾಂತವನ್ನು ಅನುಸರಿಸುತ್ತಿರುವುದು ವಿಶೇಷ. ನೈಸರ್ಗಿಕ, ಶೂನ್ಯ, ಸಹಜ, ಸಾವಯವ, ಕೃಷಿಯ ಸಿದ್ಧಾಂತ, ನೀರಿನ ಮಿತ ಬಳಕೆ, ನೀರಾವರಿ ಪದ್ಧತಿಗಳ ಕ್ರಮಬದ್ಧ ನಿರ್ವಹಣೆ, ಮಳೆ ನೀರಿನ ಕೊಯ್ಲು, ಸುಧಾರಿತ ಅಡಿಕೆ ಬೇಸಾಯ, ಬಹು ಮಹಡಿ ಮಿಶ್ರ ಬೆಳೆ ಪದ್ಧತಿ, ಉತ್ತಮ ಸಾಗುವಳಿ, ಇತ್ಯಾದಿ ಇವರದ್ದು. ತೋಟದಲ್ಲಿ ಸಿಗುವ ಕೃಷಿ ತ್ಯಾಜ್ಯಗಳೇ ಗಿಡ ಮರಗಳಿಗೆ ಮುಖ್ಯ ಗೊಬ್ಬರ. ನಾಲ್ಕು ಎಕರೆ ಅಡಿಕೆ ತೋಟದಲ್ಲಿ 20 ಕ್ವಿಂಟಲ್‌ಗಿಂತಲೂ ಹೆಚ್ಚು ಇಳುವರಿ. ಕೊಕ್ಕೊ, ಬಾಳೆ, ತೆಂಗು, ಜಾಯಿಕಾಯಿ, ಕಾಳುಮೆಣಸು, ವಗೈರೆ ಉಪಬೆಳೆಗಳ ಉತ್ಪನ್ನ ಬೇರೆಯೇ ಇದೆ. ಇವರು ಮನೆಯ ಸುತ್ತಮುತ್ತ ಆಕರ್ಷಕ ವೃಂದಾವನ, ತೋಟದ ನಡುವೆ ಗಿಡಗಳನ್ನು ಮಕ್ಕಳಂತೆ ಆರೈಕೆ ಮಾಡುತ್ತಾರೆ. 40ಕ್ಕೂ ಅಧಿಕ ದಾಸವಾಳ, 25ಕ್ಕೂ ಮಿಕ್ಕಿ ಗುಲಾಬಿ, 20ಕ್ಕೂ ಹೆಚ್ಚು ಹಣ್ಣಿನಗಿಡ ಗಳಲ್ಲದೆ ಅತ್ಯಮೂಲ್ಯ ಔಷಧಿಗಿಡಗಳ ಅಪೂರ್ವ ತೋಟವನ್ನು ನಿರ್ಮಿಸಿದ್ದಾರೆ. ಇವೆಲ್ಲದರ ನಡುವೆ ಸಾಹಿತ್ಯ. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮುಕ್ತ ವೇದಿಕೆ ಒದಗಿಸುವ 'ಶ್ರೀರಂಗ' ಬಯಲು ರಂಗಮಂದಿರ. ರಸಸ್ವಾದನೆ ಗೊಂದು ಆಕರ್ಷಕ ತಾಣ. ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಪೈಲೂರು ಶ್ರೀನಿವಾಸರಾಯರು 1960–70ರ ದಶಕದಲ್ಲಿ ಉಚಿತ ವಾಚನಾಲಯ ಮತ್ತು ವಯಸ್ಕರ ಶಿಕ್ಷಣವನ್ನು ನಡೆಸಿದಲ್ಲದೆ, ತನ್ನ ಮನೆಯಲ್ಲಿ ಮಕ್ಕಳಿಗೆ ರಜಾದಿನಗಳಲ್ಲಿ ವಿಶೇಷ ಶಿಬಿರಗಳನ್ನು ನಡೆಸಿ ಕೊಡುವರು. ಬಿಡುವಿಲ್ಲದ ಕೆಲಸದ ನಡುವೆಯೂ ಕೃಷಿಕರ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ಹೃದಯ ಶ್ರೀಮಂತಿಕೆ ಇವರಲ್ಲಿದೆ. ಕಷ್ಟದಲ್ಲಿದ್ದ ವರಿಗೆ, ಬಡವಿದ್ಯಾರ್ಥಿಗಳಿಗೆ ತನ್ನಿಂದಾದ ಸಹಾಯವನ್ನು ನೀಡುತ್ತಿದ್ದಾರೆ. ಹತ್ತಾರು ವರ್ಷಗಳ ಕಾಲ ಚೊಕ್ಕಾಡಿ ಪ್ರೌಢಶಾಲೆಯಲ್ಲಿ ಗೌರವ ಶಿಕ್ಷಕ ರಾಗಿ, ವ್ಯವಸ್ಥಾಪಕರಾಗಿ, ಕಾರ್ಯದರ್ಶಿಯಾಗಿ ಗಣನೀಯ ಸೇವೆ ಸಲ್ಲಿಸಿ ದ್ದಾರೆ. ಆ ಸಂಸ್ಥೆಯ ಸ್ಥಾಪಕ ಸದಸ್ಯರೂ ಕೂಡ ಆಗಿದ್ದರು.

ರಾಯರು ತಮ್ಮ ತಂದೆ ಪ್ರಾರಂಭಿಸಿದ ''ದಕ್ಷಿಣ ಕನ್ನಡ ಜೇನು ಸಂಘ'' ಇದರ ಅಧ್ಯಕರಾಗಿ ಕಾರ್ಯ ನಿರ್ವಹಿಸಿದ್ದರು. ಕೇವಲ ಭೂಮಿಯ ನಕ್ಷೆಯಲ್ಲಿ ಪೆಂಡುಲಮ್ ಮೂಲಕ ನೂರಾರು ಮಂದಿಗೆ ಅಂತರ್ಜಲ ಶೋಧಿಸಿಕೊಟ್ಟಿದ್ದಾರೆ. ಹೀಗೆ ಇವರ ಸಮಾಜಸೇವೆಯ ಬಹು ಮುಖ ವ್ಯಕ್ತಿತ್ವ ತೆರೆದುಕೊಳ್ಳುತ್ತದೆ. ಹಿರೇಮಗಳೂರು ಮತ್ತು ಸುಳ್ಯದ ಸ್ನೇಹ ಶಿಕ್ಷಣ ಸಂಸ್ಥೆ ಹಾಗೂ ಇತರ ಸಂಘ ಸಂಸ್ಥೆಯವರು ಇವರನ್ನು ಸನ್ಮಾನಿಸಿದ್ದಾರೆ. ಇವರ ಇಷ್ಟೆಲ್ಲಾ ಸಾಧನೆಯನ್ನು ಗುರುತಿಸಿ 2004–05ನೇ ಸಾಲಿನ 'ಕೃಷಿ ಪಂಡಿತ ' ಪ್ರಶಸ್ತಿಯನ್ನು ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಕುಮಾರ ಸ್ವಾಮಿಯವರು ರೂ. ಒಂದು ಲಕ್ಷ ಬಹುಮಾನ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದಾರೆ.

ಬದಲಾದ ಗ್ರಾಮೀಣ ಬದುಕು- ಒಂದು ಚಿಂತನೆ

ಶ್ರೀನಿವಾಸ ಪೈಲೂರು

ಕೃಷಿಕರು ಪೂರ್ತಿ ಆರ್ಥಿಕ ಬೆಳೆಗಳಿಗೆ ಮಾತ್ರ ಪ್ರಾಧಾನ್ಯ ಕೊಡದೆ, ತನಗೆ ಉಪಯೋಗಕ್ಕೆ ಬೇಕಾದ ಆಹಾರ, ಧಾನ್ಯ, ಗೆಡ್ಡೆ ಗೆಣಸು, ಸೊಪ್ಪು ತರಕಾರಿ, ಹಣ್ಣು ಹಂಪಲು ತಾನೇ ಬೆಳೆದು ಉಪಯೋಗಿಸಬೇಕು. ವಿದ್ಯುತ್, ಫೋನ್, ವಾಹನ ಇತ್ಯಾದಿಗಳ ಅವಲಂಬನೆ ಆದಷ್ಟು ಕಮ್ಮಿ ಮಾಡಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಉಪ ಯೋಗಿಸಲೇಬಾರದು. ಸಾವಯವ ಕೃಷಿ, ಬಹುಮಹಡಿ ಕೃಷಿ, ಸಹಜ ಕೃಷಿ, ಶೂನ್ಯ ಕೃಷಿಯಲ್ಲಿರುವ ತನಗೆ ಅನುಕೂಲವಾದ ವಿಷಯಗಳನ್ನು ತನ್ನ ಕೃಷಿಯಲ್ಲಿ ಅಳವಡಿಸಿ, ನೆಮ್ಮದಿಯಿಂದ, ಆರೋಗ್ಯವಂತರಾಗಿರಬೇಕು. ನಗರಗಳಲ್ಲಿ ದೊರೆಯುವ ಬೇಕರಿ ಪದಾರ್ಥ ಇತರ ಆಹಾರ ಪದಾರ್ಥಗಳನ್ನು ಆದಷ್ಟು ಬಿಡಬೇಕು. ತಂಪಾದ ಗಾಳಿ, ಶುದ್ಧವಾದ ನೀರು, ಪ್ರಶಾಂತ ವಾತಾವರಣ, ಹಕ್ಕಿಗಳ ಚಿಲಿಪಿಲಿ ನಾದ, ಜುಳು ಜುಳು ಹರಿದು ಸಂಗೀತಲಹರಿಯನ್ನು ನೀಡುವ ಹಳ್ಳ ತೋಡುಗಳು, ಪರಿಚಿತ ಬಂಧು ಮಿತ್ರರು ನಗರದಲ್ಲಿ ಸಿಕ್ಕಲಾರರು. ಮಾನಸಿಕವಾಗಿಯೂ ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ ಎನ್ನುವ ಕವಿ ವಾಣಿ ಯಂತೆ ಈ ದಿನ ಸಂತೋಷವಾಗಿ ಕಳೆಯಬೇಕು. ಒಳ್ಳೆಯ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು.

ದನಗಳ ಉಣ್ಣೆಗೆ ಒಲೆ ಬೂದಿ

ದನದ ಕೊಟ್ಟಿಗೆಯಲ್ಲಿ ಒಲೆ ಬೂದಿ ಹರಡಿ ದನಗಳನ್ನು ಮಲಗಲು ಬಿಟ್ಟರೆ ಒಂದು ವಾರದಲ್ಲಿ ಉಣ್ಣೆಗಳು ನಿಯಂತ್ರಣವಾಗುತ್ತವೆ. ಪ್ರತಿದಿನ ಒಲೆ ಬೂದಿ ಹರಡುತ್ತಿರಬೇಕು. ಹಿಂದಿನ ದಿನದ ಬೂದಿ ಮೇಲೆ ದನಗಳನ್ನು ಕಟ್ಟಬಾರದು. ಸಗಣಿ ಬೂದಿಯನ್ನು ಬೆಳಿಗ್ಗೆ ತೆಗೆದು ಸ್ವಚ್ಛಮಾಡಬೇಕು. ರಾತ್ರಿ ಮಲಗಿದಾಗ ಬೂದಿಯನ್ನು ಬಾಲದಿಂದ ಮೈಗೆ ಹರಡುವಂತೆ ಹೊಡೆದುಕೊಳ್ಳುತ್ತವೆ. ಮೈಗೆಲ್ಲಾ ಬೂದಿ ಅಂಟಿಕೊಂಡಾಗ ಉಣ್ಣೆಗಳು ರಕ್ತಹೀರುವುದನ್ನು ಬಿಟ್ಟು ಕೆಳಗೆ ಬೀಳುತ್ತವೆ. ಬೆಳಿಗ್ಗೆ ಕೊಟ್ಟಿಗೆ ಸ್ವಚ್ಛ ಮಾಡು ವುದರಿಂದ ಸಗಣಿಯೊಂದಿಗೆ ಸೇರಿ ಅವು ಸಾಯುತ್ತವೆ. ಅನೇಕ ರೈತರಿಂದ ಈ ಅನುಭವದ ಮಾತು ಕೇಳಿ ಬಂದಿದೆ.

ಸಂಗ್ರಹ: ಬಿ. ಬಸವರಾಜ್, ಸಂತೆಶಿವರ.

ರುದ್ರಪ್ಪ ಶೆಟ್ಟರ ನಾಟಿ ಔಷಧಿಗಳು

ಹಾಸನ ಜಿಲ್ಲೆ ಬೇಲೂರು ತಾಲೂಕು ಮಲ್ಲಿಕಾರ್ಜುನಪುರದ ರುದ್ರಪ್ಪ ಶೆಟ್ಟರು ಸುಮಾರು ಮೂವತ್ತು ವರ್ಷಗಳಿಂದ ಜಾನುವಾರಗಳ ಹತ್ತಾರು ಕಾಯಿಲೆಗೆ ನಾಟಿ ಔಷಧಿಯನ್ನು ನೀಡಿ ಗುಣಪಡಿಸಿರುತ್ತಾರೆ. ಇವರು ಸ್ಥಳೀಯವಾಗಿ ದೊರೆ ಯುವ ಗಿಡಗಳನ್ನು ಬಳಸಿ ಕೊಡುತ್ತಿರುವ ಕೆಲವು ಮುಖ್ಯ ಜಾನುವಾರು ಔಷಧಿಗಳ ವಿವರ ಈ ಕೆಳಗಿವೆ.

1) ದನಗಳಿಗೆ ಕೊಳಕ ಮಂಡಲ ಹಾವು ಕಚ್ಚಿದರೆ ಅಥವಾ ಉಸಿರು ಬಿಟ್ಟಿದರೆ, ದನಗಳ ಮೈಮೇಲೆ ಗುಳ್ಳೆ ರೀತಿ ಊದಿರುತ್ತದೆ. ಇದಕ್ಕೆ ಔಷಧಿಯಾಗಿ ಚಿಟ್ಟೆ ಹರಳು (ಔಡಲ) ದ ಬೇರು (1/4 ಕಿಲೊ) ಸಣ್ಣಗೆ ಜಜ್ಜಿ ಒಂದು ಲೀಟರ್ ನಾಟಿ ಹಸುವಿನ ಮಜ್ಜಿಗೆಯಲ್ಲಿ ಮಿಶ್ರಗೊಳಿಸಿ, ಅರ್ಧ ಲೀಟರ್‌ನಷ್ಟು ಕುಡಿಸಬೇಕು. ಇನ್ನರ್ಧ ಲೀಟರ್‌ನಷ್ಟು ಮೈಗೆ ಸವರುವುದು. ಹೀಗೆ ದಿನಕ್ಕೆರಡು ಬಾರಿ ಎರಡು ದಿನಗಳು ಔಷದೋಪಚಾರ ಮಾಡಿದರೆ ಈ ಕಾಯಿಲೆ ಗುಣವಾಗುತ್ತದೆ ಎನ್ನುತ್ತಾರೆ.

2) ಇದೇ ರೀತಿ ದೀಪ ಮಂಡಲ ಹಾವು ದನಗಳಿಗೆ ಕಚ್ಚಿದರೆ ಅಥವಾ ಉಸಿರು ಬಿಟ್ಟರೆ ದನದ ಮೈ ಊದುವುದಂತೆ. ಇದಕ್ಕೆ ಪರಿಹಾರವಾಗಿ ಜತ್ರೋಪದ ಸಿಪ್ಪೆ ಸುಮಾರು 250 ಗ್ರಾಂನ್ನು ಸಣ್ಣಗೆ ಜಜ್ಜಿ ಎರಡು ಲೀಟರ್ ದೇಶೀ ಹಸುವಿನ ಹುಳಿ ಮಜ್ಜಿಗೆಯಲ್ಲಿ ಮಿಶ್ರಗೊಳಿಸಬೇಕು. ಒಂದು ಲೀಟರ ನಷ್ಟನ್ನು ಕುಡಿಸಿ ಇನ್ನೊಂದು ಲೀಟರ್‌ನಷ್ಟನ್ನು ಮೈಗೆ ಹಚ್ಚಿದರೆ ಕಾಯಿಲೆ ವಾಸಿಯಾಗುತ್ತದೆಯಂತೆ.

3) ದನಗಳ ಕಣ್ಣಿನಲ್ಲಿ ಹೂ ಕೂತಾಗ, ಗೋಲಿಗಾತ್ರದ ನಾಟಿ ಹಸುವಿನ ಬೆಣ್ಣೆಗೆ ಮೂರು ಹನಿ ಎಕ್ಕದ ಹಾಲು ಮಿಶ್ರಮಾಡಿಕೊಂಡು ಹೂ ಕಣ್ಣಿನ ಭಾಗದ ನೇರ ಗುಂಡಿ ಕಿವಿ ಪಕ್ಕದಲ್ಲಿ ಒಂದೇ ಬಾರಿ ಇಟ್ಟರೆ ಸಾಕು. 25 ದಿನಗಳಲ್ಲಿ ಕಣ್ಣುವಾಸಿಯಾಗುತ್ತದೆ. ಇಟ್ಟ ಜಾಗದಲ್ಲಿ ಸ್ವಲ್ಪವೇ ಮಾತ್ರ ಚರ್ಮಸುಲಿಯುತ್ತದೆ ತೊಂದರೆಯೇನು ಇಲ್ಲಾ ಎನ್ನುವರು.

4) ದನಗಳ ಕಣ್ಣಿಗೆ ಹೂ ಕೂತು ಕಣ್ಣೀರು ಬರುತ್ತಿದ್ದರೆ, ಪುಟ್ಟೆಳ್ಳೆಣ್ಣೆ ದಿನಕ್ಕೆರಡು ಬಾರಿ 12 ದಿನ ಹಚ್ಚಿದರೆ ಕಣ್ಣುವಾಸಿಯಾಗುತ್ತದೆನ್ನುತ್ತಾರೆ.

5) ಸೆಲೆ ಜ್ವರಯಾದರೆ ನಾಟಿ ಪಪ್ಪಾಯಿಯ ಬೇರು 250 ಗ್ರಾಂ ನಷ್ಟು ಸಣ್ಣಗೆ ಜಜ್ಜಿ, ಕಡಜನ ಗೂಡು, ಹತ್ತು ತುರಿಕುಮೆಣಸಿನಕಾಯಿ, ಹತ್ತು ಕಾಳು ಮೆಣಸು, ಒಂದು ಬೆಳ್ಳುಳ್ಳಿ ಗಡ್ಡೆ, ಪುಡಿಮಾಡಿ ಎರಡು ಲೀಟರ್ ನೀರಿನಲ್ಲಿ ಮಿಶ್ರಗೊಳಿಸಿ ಕುಡಿಸಿದರೆ, ಸುಮಾರು ಒಂದು ಗಂಟೆಯಲ್ಲಿ ಜಾನುವಾರು ಸೆಲೆ ವಾಸಿಯಾಗುತ್ತದೆ ಎನ್ನುತ್ತಾರೆ.

6) ದನಗಳ ಗಾಯಕ್ಕೆ ಹುಳ ಬಿದ್ದಿದ್ದರೆ, ಮೂರು ಎಕ್ಕದ ಕುಡಿಯನ್ನು ಮೇವಿನೊಳಗೆ ಒಂದೊಂದೆ ಕುಡಿಯನ್ನು ತಿನಿಸಿದರೆ, ಒಂದು ಗಂಟೆಯೊಳಗೆ ಹುಳು ಬಿದ್ದು ಹೋಗುತ್ತದೆ ಎನ್ನುತ್ತಾರೆ.

7) ಹಸು ಮಾಸ ಅಥವಾ ಕಸ (ಪ್ಲಾಸೆಂಟಾ) ಹಾಕದಿದ್ದಾಗ ಐದೈದು, ಚಪ್ಪರದ ಅವರೆ ಎಲೆ, ಮೂಲಂಗಿ ಎಲೆ, ಹರಳು ಎಲೆ, ಬಿದಿರು ಸೊಪ್ಪು, ಇಷ್ಟನ್ನು ತಿನ್ನಿಸಿದರೆ ಹಸು ಮಾಸವನ್ನು ಹಾಕುತ್ತದೆಯಂತೆ. ಜೊತೆಗೆ ಈ ಸಮಯದಲ್ಲಿ ಒಣ ಹುಲ್ಲು ತಿನ್ನಿಸಬೇಕೆನ್ನುತ್ತಾರೆ.

8) ಜಾನುವಾರಗಳಿಗೆ ಕೆಮ್ಮು ಮತ್ತು ಸೀನು ಇದ್ದಾಗ ಮೂಖರ್ತಿ (Cassineglauca) ಮರದ ಎಲೆ ನಾಲ್ಕೈದು ಮೇವಿನ ಜೊತೆ ತಿನ್ನಿಸಿದರೆ ಕೆಮ್ಮು ವಾಸಿಯಾಗುತ್ತದೆನ್ನುತ್ತಾರೆ.

9) ಹೊರಿಗೊಲಿನಿಂದ ಬೀಜ ಕಸಿಮಾಡಿದರೆ ಕರಿಗಣಿಕೆ ಸೊಪ್ಪಿನ ರಸ ಹಚ್ಚಬೇಕು, ಇದರಿಂದ ಊದು ಹಾಗೂ ಭಾದೆ ಕಡಿಮೆಯಾಗುತ್ತದೆನ್ನುತ್ತಾರೆ.

10) ಎತ್ತುಗಳಲ್ಲಿ ಹೆಗಲು ಬಾವು ಆದರೆ ನಾಲ್ಕು ಹನಿ ಹರಳೆಣ್ಣೆ, ಮೂರು ಹನಿ ಎಕ್ಕದ ಹಾಲು ಮಿಶ್ರ ಮಾಡಿ ಗೇಣುದ್ದ ಬಟ್ಟೆ ದಾರಕ್ಕೆ ಲೇಪಿಸಿ ಬಾವುವಿನ ಕೆಳಭಾಗಕ್ಕೆ ಒತ್ತಿಗೆರೆ ರೀತಿ ಒಡೆದರೆ ಸಾಕು ವಾಸಿಯಾಗುತ್ತದೆ. ಇದು ಒಂದು ಬಾರಿ ಸಾಕೆನ್ನುವರು.

11) ಇದೇ ರೀತಿ ಹೆಗಲಬಾವುವಿಗೆ ಲೈಫ್ ಬಾಯ್ ಸೋಪನ್ನು ನೀರಿನಲ್ಲಿ ನೊರೆ ಬರುವವರೆಗೆ ಹಚ್ಚಿ, ತಕ್ಷಣ ಉಳುಮೆ ಮಾಡಲು ಅಥವಾ ಗಾಡಿ ಊಡಿದರೆ ಹೆಗಲ ಬಾವು ಎರಡು ದಿನದಲ್ಲಿ ವಾಸಿಯಾಗುತ್ತದೆನ್ನುತ್ತಾರೆ.

ಗಾಯಕ್ಕೆ ಮುತ್ತುವ ನೊಣಗಳಿಂದ ದೂರವಿರಲು

ಒರಿಸ್ಸಾ ರಾಜ್ಯದ ತೈನ್ಸಿಗ್ರಾಮದ ಶ್ರೀಅಂತರ್ಯಾಮ ಪ್ರಧಾನ್ ಜಾನುವಾರುಗಳ ಗಾಯಕ್ಕೆ ಮುತ್ತುವ ನೊಣ ಮತ್ತು ಇತರೆ ಕೀಟಗಳ ಕಾಟ ತಪ್ಪಿಸಿಲು ಸೀತಾಫಲದ ಎಲೆಗಳನ್ನು ಚೆನ್ನಾಗಿ ಅರೆದು ಗಾಯದ ಮೇಲೆ ಸವರುತ್ತಾರೆ. ಇದರಿಂದ ಗಾಯ ಬೇಗ ವಾಸಿಯಾಗುವುದು ಮಾತ್ರವಲ್ಲ ಸಾಮಾನ್ಯವಾಗಿ ಗಾಯದ ಮೇಲೆ ಕೂರುವ ನೊಣಗಳು ವಿಪರೀತ ತೊಂದರೆ ಕೊಡುವ ಕಾಟದಿಂದ ದೂರವಿರಿಸಬಹುದು ಎಂದು ತಿಳಿಸಿರುವರು.

ಮೂಲ : ಹನಿ ಬೀ 17 (1) (2) ಜನವರಿ – ಜೂನ್ 2006, ಪುಟ –41–

ಜಂತು ಹುಳು ನಿಯಂತ್ರಣ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಮುಂಡಗೋಡು ಹಾಗೂ ಯಲ್ಲಾಪುರ ಭಾಗಗಳ ಗೌಳಿ ಜನಾಂಗದವರು ದನದ ಕೊಟ್ಟಿಗೆಯಲ್ಲಿ ಪುಟ್ಟ ಕರುಗಳಿಗಾಗಿಯೇ ಒಂದು ಪ್ರತ್ಯೇಕ ಗುಡಿಸಲು ಮಾಡಿರುತ್ತಾರೆ. ಈ ಗುಡಿಸಲಿನಲ್ಲಿ ದನದಕರು ಮತ್ತು ಎಮ್ಮೆ ಕರುಗಳ ಸಮೀಪ ಮತ್ತೀ ಮರದ ಹಸಿರು ಸೊಪ್ಪನ್ನು ತೂಗೂ ಹಾಕಿರುತ್ತಾರೆ. ಈ ಪುಟ್ಟ ಕರು ತಾಯಿಯ ಹಾಲು ಕುಡಿಯುವಾಗ ಬೇಗ ಹಸಿರು ಹುಲ್ಲು ತಿನ್ನುವುದನ್ನು ಕಲಿಯುವುದಿಲ್ಲ. ಪ್ರತಿ ದಿನ ಮತ್ತೀಮರದ ಸೊಪ್ಪನ್ನು ಒಂದೊಂದೆ ಎಲೆ ತಿನ್ನಲು ಈ ಕರುಗಳು ಕಲಿಯುತ್ತವೆ. ಮತ್ತಿಸೊಪ್ಪು ಕರುಗಳ ಹೊಟ್ಟೆಯಲ್ಲಿ ಜಂತುಹುಳು ಆಗದಂತೆ ಔಷಧವಾಗಿಯೂ ಕೆಲಸ ಮಾಡುತ್ತದೆ. ಜತೆ ಜತೆಗೆ ಕರುಗಳು ಹಸಿರು ತಿನ್ನೂವುದನ್ನೂ ಕಲಿಯುತ್ತವೆ. ಇದು ಗೌಳಿ ಜನಾಂಗದ ಒಂದು ಸರಳ ಸಂಪ್ರಾದಯವೇ ಆಗಿದೆಯಂತೆ.

ಸಂಗ್ರಹ: ಸಿದ್ದಾರಾಜು ತರುಕರುಹಳ್ಳಿ.

ಅಹಮದಾಬಾದಿನ 'ಸತ್ವಿಕ್' ಸಾಂಪ್ರದಾಯಕ ಆಹಾರ ಮೇಳ

ಕಳೆದ ಮೂರು ನಾಲ್ಕು ವರ್ಷಗಳಿಂದ ಆಹಾರ ಪ್ರಿಯ ಅಹಮದಾಬಾದಿನ ಜನರಿಗೆ ಪಾರಂಪರಿಕ ಮತ್ತು ಸಾವಯವ ಆಹಾರ ಸವಿಯುವಂತೆ ಮಾಡುವ ಒಂದು ಪ್ರಯತ್ನ ನಡೆಯುತ್ತಿದೆ. ಪ್ರೊ.ಅನಿಲ್‌ಗುಪ್ತ ನೇತೃತ್ವದ ಸೃಷ್ಟಿ (SRISTI)ಮತ್ತು ಹನಿಬೀ ಬಳಗ, ಒಗ್ಗೂಡಿ ಈ ಸಲದ ಇಂತಹ ಒಂದು ಆಹಾರ ಮೇಳವನ್ನು ಇದೇ ನವೆಂಬರ್ 25 ರಿಂದ 27 ರವರೆಗೆ ಅಹಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆಯ ಆವರಣದಲ್ಲಿ ಏರ್ಪಡಿಸಿರುತ್ತವೆ. ಇದರಲ್ಲಿ ಗುಜಾರಾತಿನ ಸಾಮಾನ್ಯ ಅಡಿಗೆಗಳಾದ ದಾಲ್‌ಬಾಟಿ ಚೂರ್ಮ, ವಿವಿಧ ಬೇಳೆಗಳಿಂದ ಮಾಡಿದ ಜಿಲೇಬಿ ಇತ್ಯಾದಿಗಳಿಂದ ಹಿಡಿದು ತುಳಸಿಯ ಸೂಪ್ , ಬಿದಿರಿನ ಬೀಜದ ಹಲ್ವ, ಬೆಂಡೆಕಾಯಿ ಚಟ್ನಿ, ಒಂಟೆಹಾಲಿನಿಂದ ತಯಾರಿಸಿದ ಐಸ್ ಕ್ರೀಮ್ ವರೆಗೆ ಹತ್ತಾರು ಊಟ ತಿಂಡಿಗಳನ್ನು ಸವಿಯುವಂತೆ ಮಾಡಲಾಗಿರುತ್ತದೆ. ಗುಜಾರಾತಿನ ಪಾರ್ಸಿ ಸಮುದಾಯದ ಮಹಿಳಾ ಸಂಘ ಒಂದು ವಿಶೇಷ ಮಳಿಗೆ ಹಾಕಿದ್ದು ಇವರ ಬಿರ್ಯಾನಿ ಇತ್ಯಾದಿ ಧನ್‌ಶಾಕ್ ಆಹಾರಗಳ ಪರಿಚಯವು ಮಾಡಲಾಗಿರುತ್ತದೆ. ಜೊತೆಗೆ ನಮ್ಮ ದಕ್ಷಿಣದ ರಾಗಿ ಮುದ್ದೆ , ದೋಸೆ, ಪಕೋಡಗಳನ್ನೂ ಇಲ್ಲಿ ಬಡಿಸಿ ಮೆಲ್ಲುವಂತೆ ಮಾಡಲಾಯಿತು. ರಾಜಸ್ಥಾನದ ನಮ್ಮ ಹನಿಬೀ ಬಳಗದ ಹಿರಿಯ ರೈತ ಮಿತ್ರ ಸುಂದರಾಂ ಕೂಡ ತಮ್ಮ ರಾಜಸ್ಥಾನಿ ತಿಂಡಿಗಳನ್ನು ಬಡಿಸಿ, ಮೂರುದಿನಗಳಲ್ಲಿ ಸುಮಾರು 60,000ರೂ ಆದಾಯಗಳಿಸಿರುವರು. ಜೊತೆಗೆ ಸಾವಯವ ಬೆಲ್ಲ, ಹಣ್ಣುತರಕಾರಿ, ದಕ್ಷಿಣದ ಕಾಳು ಮೆಣಸು, ಏಲಕ್ಕಿಗಳ ಮಾರಾಟದ ವ್ಯವಸ್ಥೆ ಕೂಡ ಈ ಮೇಳದಲ್ಲಿತ್ತು, ಅಹಮದಾಬಾದಿನ ಸುಮಾರು 30 ಶಾಲಾಕಾಲೇಜುಗಳ 20–25 ಸಾವಿರ ವಿದ್ಯಾರ್ಥಿಗಳೂ ಈ ಸತ್ವಿಕ್ ಮೇಳದಲ್ಲಿ ಪಾಲ್ಗೊಂಡಿದ್ದರಂತೆ.ಪಿಜ್ಜಾ ಪೆಪ್ಸಿಗಳಂತಹ ಹಳಸಲು ಆಹಾರಕ್ಕೆ ಮಾರುಹೋಗುತ್ತಿರುವ ಈ ದಿನಗಳಲ್ಲಿ ನಮ್ಮ ಯುವಜನಾಂಗವನ್ನು ರುಚಿ ಮತ್ತು ಪೌಷ್ಠಿಕದಾಯಕ ಸಂಪ್ರದಾಯಿಕ ಆಹಾರದತ್ತ ಮರಳುವಂತೆ ಮಾಡುತ್ತಿರುವ ಇಂತಹ ಪ್ರಯತ್ನಗಳು ಅತ್ಯಂತ ಶ್ಲಾಘನೀಯ. ಕೊನೆಯಲ್ಲಿ ಅಹಮದಾಬಾದಿನ ಮಹಿಳೆಯರಿಗಾಗಿ ಒಂದು ಅಡಿಗೆ ಸ್ಪರ್ಧೆ ಕೂಡ ಏರ್ಪಡಿಸಲಾಗಿತ್ತು.

ಇಂಡಿಯಾ ಆರ್ಗ್ಯಾನಿಕ್ -೨೦೦೬

ಸಾವಯವ ಉತ್ಪನ್ನಗಳಿಗೆ ರಾಷ್ಟ್ರ ಮಟ್ಟದಲ್ಲಿ ಮಾರುಕಟ್ಟೆ ಸೃಷ್ಟಿಸುವ ಪ್ರಯತ್ನವಾಗಿ, ಈ ಬೃಹತ್ ಮೇಳವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ನವೆಂಬರ್ 9 ರಿಂದ 12 ರವರೆಗೆ ಏರ್ಪಡಿಸಲಾಗಿತ್ತು, ಅಂತ ರಾಷ್ಟೀಯ ಸಾವಯವ ಕೃಷಿ ಕೇಂದ್ರ (International Competence Centre for Organic Agriculture -ICCOA) ಸ್ವಿಡ್ಜರ್ ಲ್ಯಾಂಡಿನ ಸಾವಯವ ಕೃಷಿ ಸಂಶೋಧನ ಸಂಸ್ಥೆ (FIBL) ತಾಂತ್ರಿಕ ಸಹಯೋಗ ಮತ್ತು ಸಾವಯವ ಕೃಷಿ ಚಳುವಳಿಗಳ ಅಂತರಾಷ್ಟ್ರೀಯ ಒಕ್ಕೂಟ (IFOAM) ಸ್ಥಳೀಯ ಪಾಲುಗಾರಿಕೆಯಲ್ಲಿ ಈ ಮೇಳ ಏರ್ಪಡಾಗಿತ್ತದೆ. ದೇಶದಾದ್ಯಂತ ಸಾವಯವ ಕೃಷಿ ಉತ್ಪಾದನೆ ಮತ್ತು ಮಾರುಕಟ್ಟೆಯಲ್ಲಿ ತೊಡಗಿರುವ ನೂರಾರು ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರಿ ಸ್ವಾಮ್ಯದ ಕಾಫಿ, ಟೀ,ಮತ್ತು ಸಾಂಬಾರ ಮಂಡಳಿಗಳು, ರೈತರು ಸೇರಿ ನೂರಾರು ಸಂಘ ಸಂಸ್ಥೆಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಏರ್ಪಡಿಸಿದ್ದವು. ಪಿಜ್ಜಾ ಕೋಕಾಕೋಲಗಳಿಂದ ಕಂಗೆಟ್ಟ ಬೆಂಗಳೂರು ಜನತೆಗೆ ಸಾತ್ವಿಕ ಆಹಾರ ಮತ್ತು ಸ್ವಾಸ್ಥ ಬದುಕಿನ ಆಶಾಕಿರಣ ಒಂದು ಮೇಳದಿಂದ ದೊರೆಯುವಂತಾಯಿತು.

ಸೃಷ್ಟಿ :- ಸನ್ಮಾನ ಸಮಾರಂಭ

ಅಹಮದಬಾದಿನಲ್ಲಿ ದಿನಾಂಕ 28 ರಂದು ಪ್ರತಿ ವರ್ಷದಂತೆ, ಈ ಬಾರಿಯ ಸುಮಾರು 64 ಮಂದಿಗೆ ಸೃಷ್ಟಿ (SRISTI) ಸನ್ಮಾನ ನೀಡುವ ಸಮಾರಂಭ ನೆಡೆಸಲಾಯಿತು. ತಳಮಟ್ಟದ ಅನುಶೋಧನೆ, ಪರಿಸರ ರಕ್ಷಣೆ ಒಟ್ಟಾರೆ ಕೃಷಿ ಗ್ರಾಮೀಣ ಬದುಕನ್ನು ಹಸನು ಮಾಡುವಲ್ಲಿ ತಣ್ಣನೆ ಕಾಣಿಕೆ ನೀಡುತ್ತಿರುವ ಅಸಮಾನ್ಯ ಸ್ಥಳೀಯರನ್ನು ಗುರುತಿಸಿ ಪುರಸ್ಕರಿಸುವುದೇ ಈ ಸೃಷ್ಟಿ ಸನ್ಮಾನದ ಉದ್ದೇಶ. ಈ ಬಾರಿ ಕರ್ನಾಟಕದಿಂದ ಕೆಳಗಿನ ಆರು ಜನರಿಗೆ ಸನ್ಮಾನಿಸಲಾಯಿತು. ಭಾರತೀಯ ನಿರ್ವಹಣೆ ಸಂಸ್ಥೆಯ ನಿರ್ದೇಶಕರಾದ ಡಾ.ಬಕಲ್‌ಬಾಯಿ ಮುಖ್ಯ ಅತಿಥಿಗಳಾಗಿದ್ದರು

1. ಶ್ರೀ ಮಾಧವ ರೆಡ್ಡಿ, ಬಳ್ಳಾರಿ – ಅಂಜೂರ ಒಣಗಿಸುವ ತಾಂತ್ರಿಕತೆ.
2. ಶ್ರೀ ಅಗಲಿ ನಾಗೇಶ, ಕೊಪ್ಪ ತಾ। – ಅಡಿಕೆ ಬೇರು ಹುಳ ನಿಯಂತ್ರಿಸುವ ತಂತ್ರಗಾರಿಕೆ.
3. ಶ್ರೀ ಆರ್. ಜಿ. ಹೆಗ್ಡೆ, ಸಿದ್ದಾಪುರ –ಕರಿಮೆಣಸು ತಳಿ ಶೋಧನೆ.
4. ಶ್ರೀ ಕೃಷ್ಣಮೂರ್ತಿಭಟ್ ಹೆಚ್.ಎಸ್. – ಶ್ರಿಂಗೇರಿ ಅಡಿಕೆ ಸುಲಿಯುವ ಯಂತ್ರದ ಆವಿಷ್ಕಾರ.
5. ಶ್ರೀ ಚಿಕ್ಕೆಗೌಡ, ಕೊಪ್ಪ – ಮಲೆನಾಡಿನಲ್ಲಿ ಸಹಕಾರಿ ತತ್ವ ಭಿತ್ತಿರುವುದು ಮತ್ತು 12 ನೇ ಶೋಧಯಾತ್ರೆ ನಡೆಸಲು ಸಹಕರಿಸಿರುವುದಕ್ಕಾಗಿ
6. ಶ್ರೀ ಮೊಹಮದ್, ಮಂಗಳೂರು –ಅಡ್ಡಕೊಳವೆ ಬಾವಿ ತಂತ್ರಗಾರಿಕೆಗಾಗಿ (ಅನುಪಸ್ಥಿತಿಯಲ್ಲಿ ಸನ್ಮಾನ)
7. ಶ್ರೀ ದೇವಪ್ಪ ತಿಮ್ಮಪ್ಪ, ಗದಗ–ಬದುಹಾಕಿ, ನೀರು ಮತ್ತು ಜಲ ಸಂರಕ್ಷಣೆ ಕಾರ್ಯದಲ್ಲಿ ಸತತ ಶ್ರಮಿಸಿರುವುದಕ್ಕಾಗಿ (ಅನುಪಸ್ಥಿತಿಯಲ್ಲಿ ಸನ್ಮಾನ).

ಪಠ್ಯ ಕ್ರಮದಲ್ಲಿ ಸಾವಯವ ಕೃಷಿಯ ವಿಜ್ಞಾನ ಸಲಹೆ

2006 ಸೆಪ್ಟಂಬರ್ 15 ಮತ್ತು 16 ರಂದು ಜೈವಿಕ ಕೃಷಿಕ್ ಸೊಸೈಟಿಯು ಬೆಂಗಳೂರಿನ ಹುಳಿಮಾವಿನಲ್ಲಿರುವ ಜೈವಿಕ್ ಕೇಂದ್ರದಲ್ಲಿ ಸಾವಯವ ಕೃಷಿ ಮತ್ತು ಸಮೂಹ ಮಾಧ್ಯಮ ಕುರಿತ ಕಾರ್ಯಗಾರವನ್ನು ಹಮ್ಮಿಕೊಂಡಿತ್ತು. ಸಾವಯವ ಕೃಷಿಕ ಎನ್. ನಾರಾಯಣ ರೆಡ್ಡಿ, ತೋಟಗಾರಿಕೆ ಜಂಟಿ ನಿರ್ದೇಶಕ ರಾಮಕೃಷ್ಣಪ್ಪ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ ಸಂಪಾದಕ ಕೆ.ಎನ್. ಶಾಂತಕುಮಾರ್, ಕೃಷಿ ಸಚಿವ ಬಂಡೆಪ್ಪ ಕಾಶೆಂಪೂರ, ಉದಯವಾಣಿ ಸಂಪಾದಕಿ ಪೂರ್ಣಿಮ ಮುಂತಾದವರು ಭಾಗವಹಿಸಿದ್ದರು. ಒಬ್ಬ ಕೃಷಿಕ ವಿಜ್ಞಾನಿ ಅಥವಾ ಸಂಶೋಧಕ ಆಧುನಿಕ ವಿಧಾನ ಬಳಸಿ ಮಾಡಿದ ಸಾಧನೆ ಹಾಗೂ ಅನುಸರಿಸಿದ ಮಾರ್ಗಗಳ ಕುರಿತು ಮಾತ್ರ ಪಠ್ಯದಲ್ಲಿ ವಿವರಣೆಯಿದೆ. ಆದರೆ ಇದಕ್ಕಿಂತಲೂ ಹೆಚ್ಚಿನ ಸಾಧನೆ ತೋರಿದ ದೇಶೀಯ ರೈತ ಹಾಗೂ ಆತ ಅಳವಡಿಸಿಕೊಂಡ ವಿಧಾನಗಳನ್ನು ಕೃಷಿ ವಿಜ್ಞಾನದ ಪಠ್ಯಗಳಲ್ಲಿ ಏಕೆ ಅಳವಡಿಸಬಾರದೆಂದು ಎನ್. ನಾರಾಯಣ ರೆಡ್ಡಿ ಈ ಸಂದರ್ಭದಲ್ಲಿ ಪ್ರಶ್ನೆ ಮಾಡಿದ್ದರು. ಸಾವಯವ ಕೃಷಿ ಪದ್ದತಿ ಭಾರತೀಯ ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಒಬ್ಬ ರೈತ ದಿನಕ್ಕೆ ಎರಡು ಗಂಟೆ ಸರಿಯಾಗಿ ದುಡಿದರೆ 200 ಕೋಟಿ ಜನರಿಗೂ ಆಹಾರ ಒದಗಿಸುವ ಸಾಮರ್ಥ್ಯ ಈ ಸಾವಯವ ಪದ್ದತಿಗಿದೆ ಎಂದು ಅವರು ಮಾತನಾಡಿದರು.

ಪ್ರತಿಕ್ರಿಯೆ

ಡಾ. ಪ್ರಕಾಶ್ ಕಮ್ಮರಡಿಯವರಿಗೆ ನಮಸ್ಕಾರಗಳು, ಬಹಳ ದಿನಗಳಿಂದ ತಮಗೆ ಪತ್ರ ಬರೆಯಲು ಸಾಧ್ಯವಾಗದಿರುವುದಕ್ಕೆ ಕ್ಷಮೆ ಇರಲಿ. ಕೆಲವು ತಿಂಗಳಿಂದ ನಾನು ಕುಪ್ಪಳ್ಳಿಯಲ್ಲಿ ವಾಸವಾಗಿರುವೆ. ಇಲ್ಲಿಯ ನಮ್ಮ ಜಮೀನಿನ ಮೇಲ್ವಿಚಾರಣೆಯಲ್ಲಿ ತೊಡಗಿರುವೆ. ವಯಸ್ಸು ಹಾಗೂ ಅನಾರೋಗ್ಯದಿಂದಾಗಿ ಸಾಹಿತ್ಯ ಕೃಷಿ ಬಹುಪಾಲು ಸ್ಥಗಿತವಾಗಿದೆ.

ಹಿತ್ತಲಗಿಡ ಪೈರು 11,12 ಸಂಚಿಕೆ ಇತ್ತೀಚೆಗೆ ಬಂದಾಗ ಮತ್ತೆ ನೆನಪಾಯಿತು. ಈಗ್ಗೆ 2–3 ವರ್ಷಗಳಿಂದ ಅದರ ಸಂಚಿಕೆಗಳು ತಲುಪುತ್ತಿವೆ. ತನ್ನದೇ ವಿಶಿಷ್ಟ ರೀತಿಯಲ್ಲಿ ರೈತರು ಸಮಸ್ಯೆಗಳ ಬಗ್ಗೆ ಸದ್ದಿಲ್ಲದೆ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ . ಆದರೆ ನನ್ನ ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಅಭ್ಯಾಸ ಓದು ಸಾಧ್ಯಾವಾಗುತ್ತಿಲ್ಲ, ಎಲ್ಲಾ ವಿಷಯಗಳಲ್ಲಿ ನನ್ನ ಆಸಕ್ತಿ ಕಡಿಮೆಯಾಗುತ್ತದೆ. ಆದರಿಂದಾಗಿ ಹಿತ್ತಲಗಿಡದ ಚಂದಾದಾರನಾಗಲು ಸಾಧ್ಯವಾಗುತ್ತಿಲ್ಲ ಆ ಬಗೆಗೆ ಅನಾಥ ಭಾವಿಸಬಾರದಾಗಿ ವಿನಂತಿಸುತ್ತೇನೆ. ತಮ್ಮ ಆದರ ವಿಶ್ವಾಸಗಳಿಗೆ ತುಂಬಾ ಆಭಾರಿಯಾಗಿರುತ್ತೇನೆ.

ವಂದನೆಗಳೊಂದಿಗೆ

ಇಂತಿ ತಮ್ಮ

ಎಚ್. ಡಿ. ಚಂದ್ರಪ್ಪ ಗೌಡ, ಹಿರೇಕೊಡಿಗೆ – ಕುಪ್ಪಳ್ಳಿ

ಕೊಪ್ಪ ತಾಲ್ಲೂಕು , ಚಿಕ್ಕಮಗಳೂರು – 577126

(ತಾವು ಹಿತ್ತಲ ಬಳಗದ ಅತ್ಯಂತ ಗೌರವಾನ್ವಿತ ಹಿರಿಯ ಸದಸ್ಯರು. ಗೌರವ ಪ್ರತಿ ಕಳುಹಿಸುತ್ತಿರುತ್ತೇವೆ. ದಯಮಾಡಿ ಸ್ವೀಕರಿಸಿ, ಸಲಹೆ ಸೂಚನೆ ನೀಡುತ್ತಿರಿ, ಸಂ.)

Subscription Rates for *Honey Bee*

Category	South Asia* (Indian Rs.)	International (US $ Daller)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

** Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/cheque in favour of **A/c Sristi Innovations** at the edutorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927, Email : honeybee@sristi.org;

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *'ಸಂಪಾದಕರು, ಹಿತ್ತಲಗಿಡ, ಬೆಂಗಳೂರು'* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು.

ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಐದನೇ ಮತ್ತು ಆರನೆ ಸ್ಪರ್ಧೆಗಳು

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ದಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ದಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 7,500 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ 7,500 ಸಾಂತ್ವಾನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ದತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು **'ಪೂರ್ವ ಸೂಚಿತ ಸಮ್ಮತಿ'** (Prior Informed Consent) ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಪೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಐದನೇ ಸ್ಪರ್ಧೆಗೆ ಜನವರಿ 2007 ಮತ್ತು ಆರನೆ ಸ್ಪರ್ಧೆಗೆ ಡಿಸೆಂಬರ್ 2007ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು ಹಿತ್ತಲಗಿಡ ಅಥವಾ National Coordinator, National Innovation, Foundation Bungalow No.1 Satellite Complex, Permchand Nagar Road, Ahmedabad - 380015 Gujarat. e-mail : campaign@nifindia.org ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ಪುಸ್ತಕ ಅಂಚೆ

ಗೆ,

ವಿಳಾಸ
ಡಾ.ಟಿ. ಎಸ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com